# ಯಸ್ ಬ್ಯಾಂಕ್ ಜಿಪಿಆರ್ ಪ್ರೀಪೈಡ್ ಕಾರ್ಡ್‌ಗಳಿಗೆ ನಿಬಂಧನೆಗಳು ಮತ್ತು ಷರತ್ತುಗಳು

ಇಲ್ಲಿ ಉಲ್ಲೇಖಿಸಲಾದ ನಿಬಂಧನೆಗಳು ಮತ್ತು ಷರತ್ತುಗಳು (ಇನ್ನು ಮುಂದೆ **"ನಿಬಂಧನೆಗಳು ಮತ್ತು ಷರತ್ತುಗಳು"** ಎಂದು ಉಲ್ಲೇಖಿಸಲಾಗಿದೆ) **"ಜಿಪಿಆರ್ ಪ್ರೀಪೇಯ್ಡ್ ಕಾರ್ಡ್"** ಗೆ ಅನ್ವಯವಾಗುತ್ತವೆ, ಮತ್ತು ಕಾರ್ಡ್‌ನ ಬಳಕೆಯ ಮೊದಲು ಅವುಗಳನ್ನು ಒಪ್ಪಿಕೊಳ್ಳಬೇಕು ಮತ್ತು ಸ್ವೀಕರಿಸಬೇಕು. ಈ ಕೆಳಗೆ ಸೂಚಿಸಿದ ನಿಬಂಧನೆಗಳು ಮತ್ತು ಷರತ್ತುಗಳು, ಯಸ್ ಬ್ಯಾಂಕ್ ಲಿಮಿಟೆಡ್‌ನ **"ಜಿಪಿಆರ್ ಪ್ರೀಪೇಯ್ಡ್ ಕಾರ್ಡ್"** ಗೆ ಸಂಬಂಧಿಸಿದಂತೆ ಬ್ಯಾಂಕ್ ತನ್ನದೇ ಆದ ವಿವೇಚನೆಯಿಂದ ಕಾಲಕಾಲಕ್ಕೆ ತಿದ್ದುಪಡಿ ಮಾಡಿದ  ನಿಬಂಧನೆಗಳು ಮತ್ತು ಷರತ್ತುಗಳಂತೆ, ಬ್ಯಾಂಕ್‌ನ ಆಡಳಿತ ನಿರ್ದಿಷ್ಟಪಡಿಸಿದ ಮತ್ತು ನೀವು ಮತ್ತು ಯಸ್ ಬ್ಯಾಂಕ್ ನಡುವಿನ ಸಂಪೂರ್ಣ ಒಪ್ಪಂದ ಮತ್ತು / ಅಥವಾ ವ್ಯವಸ್ಥೆಯನ್ನು ರೂಪಿಸುತ್ತವೆ.
**"ಜಿಪಿಆರ್ ಪ್ರೀಪೈಡ್ ಕಾರ್ಡ್"** ಅನ್ನು ಪಡೆದುಕೊಳ್ಳಲು ಸಹಿ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರ ಮೂಲಕ, ಇಲ್ಲಿ ನಮೂದಿಸಿದ ಪ್ರತಿಯೊಂದೂ ನಿಬಂಧನೆಗಳು ಮತ್ತು ಷರತ್ತುಗಳನ್ನು ನೀವು ಸ್ಪಷ್ಟವಾಗಿ ಓದಿದ್ದೀರಿ, ಅರ್ಥಮಾಡಿಕೊಂಡಿದ್ದೀರಿ ಮತ್ತು ಅಂಗೀಕರಿಸಿದ್ದೀರಿ ಎಂದು ಪರಿಗಣಿಸಲಾಗುತ್ತದೆ. ಯಸ್ ಬ್ಯಾಂಕ್ ಲಿಮಿಟೆಡ್‌ನ ಸಂಪೂರ್ಣ ವಿವೇಚನೆಯಿಂದ ಕಾಲಕಾಲಕ್ಕೆ ತಿದ್ದುಪಡಿ ಮಾಡಬಹುದಾದ, ಇಲ್ಲಿ ಉಲ್ಲೇಖಿಸಿದ ಎಲ್ಲಾ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧರಾಗಿರಲು ನೀವು ಒಪ್ಪುತ್ತೀರಿ.

## I. ವ್ಯಾಖ್ಯಾನಗಳು

ಈ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ, ವ್ಯತಿರಿಕ್ತ ಉದ್ದೇಶವು ಕಾಣಿಸಿಕೊಳ್ಳದ ಹೊರತು ಮತ್ತು / ಅಥವಾ ಇದಕ್ಕೆ ಹೊರತಾದ ಸಂದರ್ಭಕ್ಕೆ ಅಗತ್ಯವಿರುವ ಹೊರತು, ದೊಡ್ಡ ಅಕ್ಷರಗಳ ಪದಗಳು ಇವುಗಳಿಂದ ವ್ಯಾಖ್ಯಾನಿಸಲ್ಪಟ್ಟಿವೆ: (i) ಉದ್ಧರಣಗಳು ಮತ್ತು / ಅಥವಾ ಆವರಣದಲ್ಲಿ ಸೇರಿಸುವಿಕೆಯು ಅಲ್ಲಿ ವಿವರಿಸಿದ ಅರ್ಥಗಳನ್ನು ಹೊಂದಿವೆ; ಮತ್ತು (ii) ಈ ಕೆಳಗಿನ ಪದಗಳು ಅವುಗಳಿಗೆ ಈ ಕೆಳಗೆ ನಿಯೋಜಿಸಲಾದ ಅರ್ಥಗಳನ್ನು ಹೊಂದಿರುತ್ತವೆ:

ಎ) "ಖಾತೆ" ಅಥವಾ "ಕಾರ್ಡ್ ಖಾತೆ" ಅಂದರೆ ಅದು ಅಂತಹ ಪಿಪಿಐನಲ್ಲಿ ಲಭ್ಯವಿರುವ ಮಿತಿಗಳನ್ನು ಉಸ್ತುವಾರಿ ಮಾಡುವ ಉದ್ದೇಶಕ್ಕಾಗಿ, ಅಂತಹ ಪಿಪಿಐನಲ್ಲಿ ಲೋಡ್ ಮಾಡಲಾದ ಮೊತ್ತಕ್ಕೆ ಸಮಾನವಾದ ಖಾತಾ ಶಿಲ್ಕು(ಬ್ಯಾಲೆನ್ಸ್) ಇರುವ ಪ್ರಿಪೇಯ್ಡ್ ಖಾತೆಯನ್ನು ಉಲ್ಲೇಖಿಸುತ್ತದೆ.

ಬಿ) "ಅರ್ಜಿ ನಮೂನೆ" ಅಂದರೆ ಸನ್ನಿವೇಶವು ಅನುಮತಿಸಬಹುದಾದ ಅಥವಾ ಸಂದರ್ಭಕ್ಕೆ ಅಗತ್ಯವಿರಬಹುದಾದ ಮತ್ತು / ಅಥವಾ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಅಗತ್ಯವಿರುವ ಎಲ್ಲಾ ಮಾಹಿತಿಯೊಂದಿಗೆ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಒದಗಿಸಿದ ಸ್ಪಷ್ಟೀಕರಣಗಳು ಮತ್ತು ಘೋಷಣೆಗಳನ್ನು ಒಳಗೊಂಡು ಗ್ರಾಹಕನು ಯಸ್ ಬ್ಯಾಂಕ್‌ಗೆ ಸಲ್ಲಿಸಿದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅರ್ಜಿ ನಮೂನೆಯು ಎಂದು ಅರ್ಥ.

ಸಿ) "ವ್ಯವಹಾರದ ದಿನ" ಎಂದರೆ ಭಾನುವಾರ ಅಥವಾ ನೆಗೋಷಿಯೆಬಲ್ ಇನ್ಸ್ಟ್ರುಮೆಂಟ್ ಕಾಯ್ದೆ,1881 ರ ಅಡಿಯಲ್ಲಿ ನಿರೂಪಿಸಿದ ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ ಬ್ಯಾಂಕಿನ ವ್ಯವಹಾರ ಮಾಡಲು ಬ್ಯಾಂಕುಗಳು ತೆರೆದಿರುವ ದಿನವಾಗಿದೆ.

ಡಿ) "ಶುಲ್ಕಗಳು" ಎಂದರೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಕೆಗೆ ಯಸ್ ಬ್ಯಾಂಕ್ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ ವಿಧಿಸಿದ ಲೆವಿ, ವೆಚ್ಚಗಳು ಮತ್ತು ಶುಲ್ಕಗಳು.

ಇ) "ನಗದು ಮಿತಿ" ಎಂದರೆ  ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮೂಲಕ ಯಾವುದೇ ದಿನದಲ್ಲಿ ಅಥವಾ ಯಸ್ ಬ್ಯಾಂಕ್‌ನಿಂದ ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಅವಧಿಯವರೆಗೆ ಗ್ರಾಹಕರು ಹಿಂತೆಗೆದುಕೊಳ್ಳಬಹುದಾದ ಗರಿಷ್ಠ ಮೊತ್ತದ ಹಣವೆಂದು ಅರ್ಥೈಸಿಕೊಳ್ಳಬೇಕು. ಈ ಮೊತ್ತವು ಯಾವುದೇ ಸಂದರ್ಭದಲ್ಲೂ ಗ್ರಾಹಕರಿಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಕೆಗೆ ಅನುಗುಣವಾಗಿ ಒಟ್ಟು ಡೆಬಿಟ್‌ಗಳನ್ನು ಕಡಿತಗೊಳಿಸಿದ ನಂತರ ಗ್ರಾಹಕರಿಗೆ ನೀಡಲಾದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ವರ್ಗಾವಣೆಗೊಂಡ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ಆಗಿರುವುದಿಲ್ಲ.

ಎಫ್) "ಗ್ರಾಹಕರು" ಅಥವಾ "ಹೋಲ್ಡರ್" ಎಂದರೆ, ಬ್ಯಾಂಕಿನಿಂದ ಪಿಪಿಐಗಳನ್ನು ಪಡೆಯುವ / ಖರೀದಿಸುವ ಮತ್ತು ಇಂತಹ ಸಲಕರಣೆಗಳಲ್ಲಿ ಸಂಗ್ರಹವಾಗಿರುವ ಮೌಲ್ಯಕ್ಕೆ ಪ್ರತಿಯಾಗಿ ಅವುಗಳನ್ನು ಹಣಕಾಸು ಸೇವೆಗಳು, ರವಾನೆ ಸೌಲಭ್ಯಗಳೂ ಸೇರಿದಂತೆ ಸರಕು ಮತ್ತು ಸೇವೆಗಳ ಖರೀದಿಗೆ ಬಳಸುವ ಯಾವುದೇ ವ್ಯಕ್ತಿ, ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯ ಸಂಸ್ಥೆ, ಪಾಲುದಾರಿಕೆ ಸಂಸ್ಥೆ, ಸಂಘ, ಕಂಪನಿ ಅಥವಾ ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಬರುವ ಇತರ ಯಾವುದೇ ಸಂಘಟನೆ ಅಥವಾ ಸಂಸ್ಥೆಯೆಂದು ಅರ್ಥೈಸಿಕೊಳ್ಳಬೇಕು.

ಜಿ) "ಗ್ರಾಹಕ ಸೇವಾ ಕೇಂದ್ರ" ಎಂದರೆ ಅದು ಗ್ರಾಹಕರ ಎಲ್ಲಾ ಪ್ರಶ್ನೆಗಳು, ದೂರುಗಳು ಅಥವಾ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಯಾವುದೇ ವಿವರಗಳನ್ನು ಅಥವಾ ಗ್ರಾಹಕರಿಗೆ ಬೇಕಾದ ಮಾಹಿತಿಗಳನ್ನು ಕೇಳಲು ಯಸ್ ಬ್ಯಾಂಕ್ ಒದಗಿಸುವ ಪ್ರೋಗ್ರಾಮ್ ಫೋನ್ ಬ್ಯಾಂಕಿಂಗ್ ಸೇವೆಗಳನ್ನು ಸೂಚಿಸುತ್ತದೆ.

ಹೆಚ್) "ಕಾರ್ಡ್ ಒಪ್ಪಂದ" ಎಂದರೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡನ್ನು ತನ್ನ ಉದ್ಯೋಗಿಗಳಿಗೆ / ಕರಾರಿನ ಸಿಬ್ಬಂದಿಗೆ ನೀಡಿಕೆಗಾಗಿ ಗ್ರಾಹಕನು ಯಸ್ ಬ್ಯಾಂಕಿನೊಂದಿಗೆ ಸಹಿ ಮಾಡಿ ಮತ್ತು ಕರಾರನ್ನು ಮಾಡಿಕೊಂಡ ಒಪ್ಪಂದದ ಪತ್ರ ಅಥವಾ ಕರಾರು ಪತ್ರ ಆಗಿದೆ ಮತ್ತು ಅದು ಕರಾರಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಮಾಡಿದ ಯಾವುದೇ ತಿದ್ದುಪಡಿಗಳನ್ನು ಒಳಗೊಂಡಿದೆ.

ಐ) "ಕಾರ್ಡ್" ಅಥವಾ "ಯಸ್ ಬ್ಯಾಂಕ್ ಜಿಪಿಆರ್ ಕಾರ್ಡ್" ಅಥವಾ ಪ್ರಿಪೇಯ್ಡ್ ಇನ್‌ಸ್ಟ್ರುಮೆಂಟ್ (ಪಿಪಿಐ) ಅಂದರೆ ಅದು ಒಂದು ಪ್ರಿಪೇಯ್ಡ್ ಇನ್‌ಸ್ಟ್ರುಮೆಂಟ್ ("ಪಿಪಿಐಗಳು" -ಕಾರ್ಡ್ / ವಾಲೆಟ್) ಆಗಿದೆ ಮತ್ತು ಅದು, ಅಂತಹ ಇನ್‌ಸ್ಟ್ರುಮೆಂಟ್‌ಗಳಲ್ಲಿ ಡಿಸೆಂಬರ್ 29, 2017 ರ ದಿನಾಂಕದ, ಪ್ರಿಪೇಯ್ಡ್ ಪಾವತಿ ಇನ್‌ಸ್ಟ್ರುಮೆಂಟ್‌ಗಳ ನೀಡಿಕೆ ಮತ್ತು ಕಾರ್ಯ ವಿಧಾನಗಳ ಪ್ರಮುಖ ನಿರ್ದೇಶನದಲ್ಲಿ ವ್ಯಾಖ್ಯಾನಿಸಲಾದಂತೆ ಸಂಗ್ರಹವಾಗಿರುವ ಮೌಲ್ಯಕ್ಕೆ ಪ್ರತಿಯಾಗಿ, ಹಣಕಾಸಿನ ಸೇವೆಗಳು, ರವಾನೆ ಸೌಲಭ್ಯಗಳು, ಇತ್ಯಾದಿ ಸೇರಿದಂತೆ ಸರಕು ಮತ್ತು ಸೇವೆಗಳ ಖರೀದಿಗೆ ಅನುಕೂಲ ಮಾಡಿಕೊಡುವ ಒಂದು ಪಾವತಿ ಸೌಲಭ್ಯವಾಗಿದೆ.

ಜೆ) "ಇಡಿಸಿ" ಅಥವಾ "ಇಲೆಕ್ಟ್ರಾನಿಕ್ ಡಾಟಾ ಕ್ಯಾಪ್ಚರ್" ಎಂದರೆ ವ್ಯವಹಾರವನ್ನು ಪ್ರಾರಂಭಿಸುವ ಸಲುವಾಗಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗಳನ್ನು ಉಜ್ಜಲು ಅಂದರೆ ಸ್ವೈಪ್ ಮಾಡಲು ಬಳಸಬಹುದಾದ ಟರ್ಮಿನಲ್, ಪ್ರಿಂಟರ್, ಇತರ ಯಾವುದೇ ಬಾಹ್ಯ ಪರಿಕರ ಮತ್ತು ಅಗತ್ಯವಿರುವ ತಂತ್ರಾಂಶ(ಸಾಫ್ಟ್‌ವೇರ್) ಎಂದರ್ಥ.

ಕೆ) "ಇಂಟರ್ನೆಟ್ ಪೇಮೆಂಟ್ ಗೇಟ್ ವೇ" ಅಂದರೆ  ಗ್ರಾಹಕರ ದೃಢೀಕರಣದ ಮೇಲೆ ಅಂತರ್ಜಾಲವನ್ನು ಬಳಸಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮೂಲಕ ಪಾವತಿಗಳನ್ನು ಅನುಮೋದಿಸಲು, ಯಸ್ ಬ್ಯಾಂಕ್ ನಿಗದಿಪಡಿಸಿದ/ ನಿಗದಿಪಡಿಸಬೇಕಾದ ನಿಯಮಾವಳಿಗಳು ಎಂದು ಸೂಚಿಸುತ್ತದೆ.

ಎಲ್) "ಕೆವೈಸಿ" ಯ ಅರ್ಥವೇನೆಂದರೆ, ಕಾಲಕಾಲಕ್ಕೆ ರಿಸರ್ವ್ ಬ್ಯಾಂಕ್ ಹೊರಡಿಸಿದ ಮಾರ್ಗದರ್ಶಿ ಸೂತ್ರಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳ ಅನುಸಾರವಾಗಿ ಗ್ರಾಹಕರ ಗುರುತು ಮತ್ತು ಪರಿಶೀಲನೆಗಾಗಿ ಬ್ಯಾಂಕಿನಿಂದ ಅಳವಡಿಸಲ್ಪಟ್ಟ, ನಿಮ್ಮ ಗ್ರಾಹಕರನ್ನು ಅರಿಯಿರಿ ಎಂಬ ಮಾರ್ಗಸೂಚಿಗಳು.

ಎಮ್) "ವ್ಯಾಪಾರಿ ಸಂಸ್ಥೆಗಳು" ಅಂದರೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅಥವಾ ಮಾಸ್ಟರ್ ಕಾರ್ಡ್ ಅನ್ನು ಸ್ವೀಕರಿಸುವ ಭಾರತದಲ್ಲಿರುವ ಮಳಿಗೆಗಳು, ಅಂಗಡಿಗಳು, ರೆಸ್ಟಾರೆಂಟ್‌ಗಳು, ಹೋಟೆಲುಗಳು ಸೇರಿದಂತೆ ಮತ್ತು ಇಷ್ಟಕ್ಕೇ ಸೀಮಿತವಾಗದ ಸಂಸ್ಥೆಗಳು.

ಎನ್) "ವೈಯಕ್ತಿಕ ಗುರುತು ಸಂಖ್ಯೆ (ಪಿನ್)" ಎಂಬುದು ಸಂಖ್ಯಾ ಗುಪ್ತಪದವಾಗಿದ್ದು(ಪಾಸ್‌ವರ್ಡ್) ಇದು ಪಿಪಿಐ ಜೊತೆಗೆ ಯಸ್ ಬ್ಯಾಂಕಿನಿಂದ ಗ್ರಾಹಕನಿಗೆ ಒದಗಿಸಲಾದ ಕಿಟ್‌ನ ಭಾಗವಾಗಿದೆ.

ಓ) "ಪಾವತಿಯ ಚಾನೆಲ್" ಎಂದರೆ ಇ.ಡಿ.ಸಿ / ಪಿಓಎಸ್ ಟರ್ಮಿನಲ್‌ಗಳು / ಕಿಯೋಸ್ಕ್ / ಇಂಟರ್ನೆಟ್ ಪೇಮೆಂಟ್ ಗೇಟ್ ವೇ ಯನ್ನು ಒಳಗೊಂಡ ಮತ್ತು ಇಷ್ಟಕ್ಕೇ ಸೀಮಿತವಾಗಿರದ ಮತ್ತು ಯಸ್ ಬ್ಯಾಂಕ್ ಕಾಲ ಕಾಲಕ್ಕೆ ತಿಳಿಸುವ ವ್ಯವಹಾರಗಳ ಹಲವು ವಿಧಾನಗಳು.

ಪಿ) "ಪಿಓಎಸ್" ಅಥವಾ "ಪಾಯಿಂಟ್ ಆಫ್ ಸೇಲ್" ಎಂದರೆ ಭಾರತದಲ್ಲಿ ವ್ಯಾಪಾರ ಸಂಸ್ಥೆಗಳಿಂದ ನಿರ್ವಹಿಸಲ್ಪಡುವ ಎಲೆಕ್ಟ್ರಾನಿಕ್ ಟರ್ಮಿನಲ್‌ಗಳು, ಇದರಲ್ಲಿ ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡನ್ನು ಹಣಕಾಸು ಸೇವೆಗಳು, ರವಾನೆ ಸೌಲಭ್ಯಗಳು ಇತ್ಯಾದಿಯನ್ನು ಒಳಗೊಂಡು ಸರಕು ಮತ್ತು ಸೇವೆಗಳನ್ನು ಖರೀದಿಸುವ ಉದ್ದೇಶಕ್ಕಾಗಿ ಬಳಸಬಹುದಾಗಿದೆ.

ಕ್ಯು) "ಪ್ರೋಗ್ರಾಂ" ಎಂದರೆ ಗ್ರಾಹಕರಿಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ನೀಡಲು ಯಸ್ ಬ್ಯಾಂಕ್ ಪ್ರೋಗ್ರಾಂ ಎಂದು ಅರ್ಥ.

ಆರ್) "ಶುಲ್ಕದ ಪಟ್ಟಿ / ಶುಲ್ಕಗಳು" ಎಂದರೆ ಯಸ್ ಬ್ಯಾಂಕಿನಿಂದ ಕಾಲ ಕಾಲಕ್ಕೆ ಶಿಫಾರಸು ಮಾಡಬಹುದಾದ ಮತ್ತು ಅದರ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸುವ ಮತ್ತು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾಗುವ ಶುಲ್ಕದ ವಿವರಗಳು ಎಂಬ ಅರ್ಥ.

ಎಸ್) "ಒಕ್ಕಣಿಕೆ(ಸ್ಟೇಟ್‌ಮೆಂಟ್)" ಎಂದರೆ ಯಸ್ ಬ್ಯಾಂಕಿನ ವ್ಯವಹಾರದ ದಾಖಲೆಗಳಲ್ಲಿ ಲಭ್ಯವಿರುವ, ಜಿಪಿ ಆರ್ ಪ್ರಿಪೇಯ್ಡ್ ಕಾರ್ಡಿನ ಮೂಲಕ ನಡೆಸಿದ ವಹಿವಾಟಿನ ಮಾಸಿಕ ವಿವರ ಎಂದು ಅರ್ಥ. ಇದರಲ್ಲಿ ಕಾರ್ಡ್ ಖಾತೆಯಲ್ಲಿ ಬಾಕಿ ಉಳಿದ ಮೊತ್ತವನ್ನು ಕೂಡಾ ತೋರಿಸಲಾಗುತ್ತದೆ.

ಟಿ) "ವಹಿವಾಟು" ಎಂದರೆ ಯಾವುದೇ ಮಾಸ್ಟರ್‌ಕಾರ್ಡ್ ಅಂಗಸಂಸ್ಥೆ, ವ್ಯಾಪಾರೀ ಸಂಸ್ಥೆ, ಯಸ್ ಬ್ಯಾಂಕ್ ಎಟಿಎಂಗಳು, ಭಾರತದ ಇತರ ಬ್ಯಾಂಕಿನ ಎಟಿಎಂಗಳಲ್ಲಿ ಅಥವಾ ಅಂತರ್ಜಾಲದ ಮೂಲಕ ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡಿನಲ್ಲಿ ನಡೆಸಿದ ಯಾವುದೇ ವಹಿವಾಟು ಎಂದರ್ಥ.

ಯು) "ವಹಿವಾಟು ಮಿತಿ" ಎನ್ನುವುದು ಯಾವುದೇ ದಿನದಲ್ಲಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಬಳಸಿ ನೇರವಾಗಿ ಅಥವಾ ಪರೋಕ್ಷವಾಗಿ ಗ್ರಾಹಕರು ವ್ಯಾಪಾರೀ ಸಂಸ್ಥೆ(ಮರ್ಚೆಂಟ್ ಎಸ್ಟಾಬ್ಲಿಷ್ಮೆಂಟ್)ಯನ್ನು ಬಳಸಿ ಅಥವಾ ಅಂತರ್ಜಾಲದ ಮೂಲಕ ಖರೀದಿಸುವ ಗರಿಷ್ಠ ಮೌಲ್ಯವೆಂದು ಅರ್ಥ. ಇದರಲ್ಲಿ ಖರೀದಿಯ ಮೊತ್ತವು, ಯಸ್ ಬ್ಯಾಂಕಿನಿಂದ ಗೊತ್ತುಪಡಿಸಿದಂತಹ ಅವಧಿಗಳಿಗೆ ಗ್ರಾಹಕರಿಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಕೆಗೆ ಅನುಗುಣವಾಗಿ ಒಟ್ಟು ಡೆಬಿಟ್‌ಗಳನ್ನು ಕಡಿತಗೊಳಿಸಿದ ನಂತರ ಗ್ರಾಹಕರಿಗೆ ನೀಡಲಾದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ವರ್ಗಾಯಿಸಲಾದ ಮೊತ್ತಕ್ಕಿಂತ ಯಾವುದೇ ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚು ಇರಬಾರದು.

ವಿ) "ವೆಬ್‌ಸೈಟ್" ಎನ್ನುವುದು ಯುಆರ್‌ಎಲ್ ನಲ್ಲಿರುವ, ಯಸ್ ಬ್ಯಾಂಕಿನ ಮಾಲೀಕತ್ವ ಹೊಂದಿದ, ಬ್ಯಾಂಕಿನಿಂದ ಸ್ಥಾಪಿತವಾದ ಮತ್ತು ನಿರ್ವಹಿಸಲ್ಪಡುವ ವೆಬ್‌ಸೈಟ್ ಎಂದರ್ಥ: www.yesbank.in ಅಥವಾ ಕಾಲಕಾಲಕ್ಕೆ ಮಾಡಬಹುದಾದ ಯಾವುದೇ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು ಒಳಗೊಂಡಿದೆ.

ಡಬ್ಲ್ಯು) "ಯಸ್ ಬ್ಯಾಂಕ್" ಎಂಬುದು ಯಸ್ ಬ್ಯಾಂಕ್ ಲಿಮಿಟೆಡ್; ಇದು ಕಂಪೆನಿಗಳ ಕಾಯ್ದೆ 1956 ರ ಅರ್ಥದಲ್ಲಿ ಮತ್ತು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949 ರ ಖಂಡ 5 (ಸಿ) ನ ಅರ್ಥದಲ್ಲಿ ಬರುವ ಒಂದು ಬ್ಯಾಂಕಿಂಗ್ ಕಂಪೆನಿಯಾಗಿದ್ದು, ಇದರ ನೋಂದಾಯಿತ ಕಚೇರಿಯ ವಿಳಾಸ - ನೆಹರೂ ಸೆಂಟರ್, 9 ನೇ ಮಹಡಿ, ಡಿಸ್ಕವರಿ ಆಫ್ ಇಂಡಿಯಾ, ಡಾ ಎ.ಬಿ. ರಸ್ತೆ, ವರ್ಲಿ, ಮುಂಬೈ 400 018.

## II ಅರ್ಥ ವಿವರಣೆಗಳು

ಈ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ, ವ್ಯತಿರಿಕ್ತವಾಗಿ ಯಾವುದೇ ಉದ್ದೇಶವು ಕಾಣಿಸದ ಹೊರತು:

ಎ) "ತಿದ್ದುಪಡಿ"ಯ ಕುರಿತಾದ ಒಂದು ಉಲ್ಲೇಖವು ಒಂದು ಪೂರಕ, ಮಾರ್ಪಾಡು, ನವೀನತೆ, ಬದಲಿ ಅಥವಾ ಪುನರಾವರ್ತನೆಯನ್ನು ಒಳಗೊಂಡಿರುತ್ತದೆ ಮತ್ತು "ತಿದ್ದುಪಡಿಸಲಾಗಿದೆ" ಎಂಬುದನ್ನು ಆ ಪ್ರಕಾರವಾಗಿ ಅರ್ಥೈಸಬೇಕು;

ಬಿ) "ದೃಢೀಕರಣ" ಅಥವಾ "ಅನುಮೋದನೆ" ಎಂದರೆ ಅದು ಒಂದು ದೃಢೀಕರಿಸುವಿಕೆ, ಒಪ್ಪಿಗೆ, ತೆರವು, ಅನುಮೋದನೆ, ಅನುಮತಿ, ತೀರ್ಮಾನ, ಪರವಾನಗಿ, ವಿನಾಯಿತಿ, ಸಲ್ಲಿಸುವಿಕೆ ಮತ್ತು ನೋಂದಣಿಯನ್ನು ಒಳಗೊಂಡಿದೆ;

ಸಿ) "ಕಾನೂನು" ಎಂದರೆ ಅದು ಯಾವುದೇ ಸಂವಿಧಾನ, ಶಾಸನ, ಕಾನೂನು, ನಿಯಮ, ನಿಯಂತ್ರಣ, ಆಜ್ಞೆ, ತೀರ್ಪು, ಆದೇಶ, ಕಟ್ಟಳೆ, ಕಾನೂನಿನ ಅಧಿಕಾರ, ಅಥವಾ ಯಾವುದೇ ಪ್ರಕಟಿತ ನಿರ್ದೇಶನ, ಮಾರ್ಗಸೂಚಿ, ಅವಶ್ಯಕತೆ ಅಥವಾ ಕಾನೂನಿನ ಬಲವನ್ನು ಹೊಂದಿರುವ ಸರ್ಕಾರಿ ನಿರ್ಬಂಧ, ಅಥವಾ ಯಾವುದೇ ನ್ಯಾಯಾಂಗ ಪ್ರಾಧಿಕಾರವು ಸಲ್ಲಿಸಿದ ಯಾವುದೇ ನಿರ್ಣಯ ಅಥವಾ ವ್ಯಾಖ್ಯಾನ, ಅದು ಸಹಿ ಮಾಡುವ / ಅರ್ಜಿ ಸಲ್ಲಿಸುವ ದಿನಾಂಕದಿಂದ ಅಥವಾ ಅದರ ನಂತರ ಜಾರಿ ಬರುವಂತಹ, ಮತ್ತು ಸಮಯದಿಂದ ಸಮಯಕ್ಕೆ ತಿದ್ದುಪಡಿ ಮಾಡಲಾಗುವಂತಹ ಪ್ರತಿಯೊಂದೂ ಕಾನೂನು ಆಗಿರುತ್ತದೆ.

ಡಿ) "ಫೋರ್ಸ್ ಮಜೆರ್ ಈವೆಂಟ್" ಎಂದರೆ ಯಾವುದಾದರೂ ಕಾರಣದಿಂದಾಗಿ ಯಸ್ ಬ್ಯಾಂಕಿನ ಕಾನೂನುಬದ್ಧವಾದ ನಿಯಂತ್ರಣವನ್ನು ಮೀರಿ, ಯಾವುದೇ ಮಿತಿಯಿಲ್ಲದೇ, ಯಾವುದೇ ಸಂವಹನ ವ್ಯವಸ್ಥೆಗಳ ಅಲಭ್ಯತೆ, ಉಲ್ಲಂಘನೆ, ಅಥವಾ ಪ್ರಕ್ರಿಯೆಗಳಲ್ಲಿ ಅಥವಾ ಪಾವತಿ ಅಥವಾ ವಿತರಣಾ ವ್ಯವಸ್ಥೆಯಲ್ಲಿ ವೈರಸ್, ಅನಾಹುತ, ಬೆಂಕಿ, ಪ್ರವಾಹ, ಸ್ಫೋಟ, ದೇವರ ಕೈವಾಡಗಳು, ಗುಂಪು ಗಲಭೆ, ಮುಷ್ಕರಗಳು ಅಥವಾ ಯಾವುದೇ ರೀತಿಯ ಕೈಗಾರಿಕೆಯ ಪ್ರಕ್ರಿಯೆಗಳು, ಗಲಭೆಗಳು, ದಂಗೆ, ಯುದ್ಧ, ಸರ್ಕಾರದ ಕಾರ್ಯಗಳು, ಕಂಪ್ಯೂಟರ್ ಹ್ಯಾಕಿಂಗ್, ಕಂಪ್ಯೂಟರ್ ಡೇಟಾ ಮತ್ತು ಸಂಗ್ರಹಣಾ ವ್ಯವಸ್ಥೆಗೆ ಅನಧಿಕೃತ ಪ್ರವೇಶ, ಕಂಪ್ಯೂಟರ್ ಕ್ರಾಶ್ ಆಗುವುದು, ಕಂಪ್ಯೂಟರ್ ಟರ್ಮಿನಲ್‌ನ ಅಸಮರ್ಪಕ ಕಾರ್ಯ ಅಥವಾ ಯಾವುದೇ ದುರುದ್ದೇಶಪೂರಿತ, ವಿನಾಶಕಾರಿ ಅಥವಾ ಭ್ರಷ್ಟಾಚಾರದ ಕೋಡ್ ಅಥವಾ ಪ್ರೋಗ್ರಾಂಗಳಿಂದ ಸಿಸ್ಟಮ್‌ಗಳಿಗಾಗುವ ಹಾನಿ, ಯಾಂತ್ರಿಕ ಅಥವಾ ತಾಂತ್ರಿಕ ದೋಷಗಳು / ವೈಫಲ್ಯಗಳು ಅಥವಾ ವಿದ್ಯುತ್ ಆಫ್ ಆಗುವುದು, ದೂರಸಂವಹನದಲ್ಲಿ ಉಂಟಾಗುವ ದೋಷಗಳು ಅಥವಾ ವೈಫಲ್ಯಗಳಿಂದ ಪ್ರಭಾವಕ್ಕೊಳಗಾಗುವ ವ್ಯವಸ್ಥೆಗಳು, ಇತ್ಯಾದಿ.

ಇ) ಏಕವಚನವು ಬಹುವಚನವನ್ನು ಒಳಗೊಂಡಿದೆ ಮತ್ತು ಪ್ರತಿಕ್ರಮವೂ ಹಾಗೆಯೇ;

ಎಫ್) ಈ ನಿಬಂಧನೆಗಳು ಮತ್ತು ಷರತ್ತುಗಳಲ್ಲಿನ ಶಿರೋನಾಮೆಗಳನ್ನು ಉಲ್ಲೇಖದ ಅನುಕೂಲಕ್ಕಾಗಿ ಮಾತ್ರ ಸೇರಿಸಲಾಗಿದೆ

ಜಿ) "ಸೇರಿವೆ" ಅಥವಾ "ಸೇರಿದಂತೆ" ಪದಗಳಿಗೆ ಉಲ್ಲೇಖಗಳನ್ನು ಮಿತಿಯಿಲ್ಲದೇ ಅರ್ಥೈಸಲಾಗುವುದು;

ಹೆಚ್) ಲಿಂಗದ ಉಲ್ಲೇಖವು ಸ್ತ್ರೀ, ಪುರುಷ ಮತ್ತು ನಪುಂಸಕ ಲಿಂಗಗಳನ್ನು ಒಳಗೊಂಡಿದೆ;

ಐ) ಯಾವುದೇ ವಿಷಯದ ಬಗ್ಗೆ ಯಸ್ ಬ್ಯಾಂಕಿನಿಂದ ಬೇಕಾಗಿರುವ ಎಲ್ಲಾ ಅನುಮೋದನೆಗಳು, ಅನುಮತಿಗಳು, ಸಮ್ಮತಿಗಳು ಅಥವಾ ಸ್ವೀಕೃತಿಗೆ, ಪೂರ್ವಭಾವಿಯಾಗಿ ಯಸ್ ಬ್ಯಾಂಕಿನ ಲಿಖಿತ ಅನುಮೋದನೆ, ಅನುಮತಿ, ಒಪ್ಪಿಗೆ ಅಥವಾ ಅಂಗೀಕಾರ ಅಗತ್ಯವಾಗಿರುತ್ತದೆ;
ಜೆ) ಯಾವುದೇ ಘಟನೆ, ಕಾರ್ಯಕಾರಣ, ಪರಿಸ್ಥಿತಿ, ಬದಲಾವಣೆ, ಸತ್ಯಾಂಶ, ಮಾಹಿತಿ, ದಾಖಲೆ, ಅಧಿಕಾರ, ಕಾರ್ಯಕಲಾಪ, ಕಾರ್ಯ, ಲೋಪ, ಹಕ್ಕು, ಉಲ್ಲಂಘನೆ, ಅನರ್ಹತೆ ಅಥವಾ ಇತರ ಇನ್ನಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಸ್ ಬ್ಯಾಂಕ್ ಮತ್ತು ಗ್ರಾಹಕರ ನಡುವೆ ಉಂಟಾದ ಯಾವುದೇ ಭಿನ್ನಾಭಿಪ್ರಾಯ ಅಥವಾ ವಿವಾದದ ಕುರಿತಂತೆ ಯಸ್ ಬ್ಯಾಂಕಿನ ಅಭಿಪ್ರಾಯವು ಅಂತಿಮವಾದುದು ಮತ್ತು ಗ್ರಾಹಕರು ಅದಕ್ಕೆ ಬದ್ಧರಾಗಿರಬೇಕು.

## III. ನಿಬಂಧನೆಗಳು ಮತ್ತು ಷರತ್ತುಗಳ ಅನ್ವಯವಾಗುವಿಕೆ:

ಎ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಕೆಗಾಗಿ ಸಾಮಾನ್ಯ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ಈ ನಿಬಂಧನೆಗಳು ಮತ್ತು ಷರತ್ತುಗಳು ಒಟ್ಟಾರೆಯಾಗಿ ಗ್ರಾಹಕ ಮತ್ತು ಯಸ್ ಬ್ಯಾಂಕ್ ನಡುವಿನ ಸಂಪೂರ್ಣ ಒಪ್ಪಂದವನ್ನು ರೂಪಿಸುತ್ತವೆ.
ಬಿ) ಕಾಲಕಾಲಕ್ಕೆ ಯಸ್ ಬ್ಯಾಂಕಿನಿಂದ ಗೊತ್ತುಪಡಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸುವ ಗ್ರಾಹಕನಿಗೆ ಯಸ್ ಬ್ಯಾಂಕಿನಿಂದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ನೀಡಲಾಗುವುದು.
ಸಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಇತರ ವ್ಯಕ್ತಿಯ ಅಥವಾ ಪಕ್ಷಕ್ಕೆ ವರ್ಗಾಯಿಸುವಂತಿಲ್ಲ.
ಡಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಅಪ್‌ಲೋಡ್ ಮಾಡಬಹುದಾದ ಗರಿಷ್ಠ ಕ್ರೆಡಿಟ್ ಬ್ಯಾಲೆನ್ಸ್ ಐಎನ್‌ಆರ್ 50,000 / --ಗೆ ಸೀಮಿತವಾಗಿರುತ್ತದೆ (ರೂ. ಐವತ್ತು ಸಾವಿರ ಮಾತ್ರ).
ಇ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಭಾರತದ ಭೂಪ್ರದೇಶದೊಳಗೆ ಮತ್ತು ಭಾರತೀಯ ರೂಪಾಯಿಗಳಲ್ಲಿನ ವ್ಯವಹಾರಗಳಿಗೆ ಮಾತ್ರ ಮಾನ್ಯವಾಗಿದೆ. ಜಿಪಿಆರ್ ಕಾರ್ಡ್ ಅನ್ನು ಭಾರತದ ಭೂಪ್ರದೇಶದ ಹೊರಗೆ ಅಥವಾ ವಿದೇಶಿ ಕರೆನ್ಸಿಗಳ ಮೂಲಕ ಮಾಡುವ ಯಾವುದೇ ವ್ಯವಹಾರಗಳಿಗೆ ಬಳಸಲಾಗುವುದಿಲ್ಲ.

ಎಫ್) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಯಸ್ ಬ್ಯಾಂಕಿನ ವಿಶಿಷ್ಟ ಆಸ್ತಿಯಾಗಿದೆ.

ಜಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡನ್ನು ಪಡೆದ ತಕ್ಷಣ ಗ್ರಾಹಕರು ಕಾರ್ಡ್‌ನ ಹಿಂಭಾಗದಲ್ಲಿ ಸಹಿ(ಸೈನ್ ಇನ್) ಮಾಡಬೇಕಾಗುತ್ತದೆ. ಗ್ರಾಹಕರಿಗೆ ಮತ್ತಷ್ಟು ಸೂಚನೆ ಅಥವಾ ಮಾಹಿತಿಯಿಲ್ಲದೇ, ಹೋಲಿಕೆಯಾಗದೇ ಇದ್ದ ಸಹಿ ಹೊಂದಿದ ಅಥವಾ ಸಹಿ ಹೊಂದಿರದ ಯಾವುದೇ ವ್ಯವಹಾರವನ್ನು ತಿರಸ್ಕರಿಸುವ ಅಥವಾ ರದ್ದುಗೊಳಿಸುವ ಹಕ್ಕನ್ನು ಯಸ್ ಬ್ಯಾಂಕ್ ಹೊಂದಿದೆ.
ಹೆಚ್) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ನಿರ್ದಿಷ್ಟಪಡಿಸಲಾದ ಕ್ರೆಡಿಟ್ ಮಿತಿಯೊಳಗೆ ಗ್ರಾಹಕರು ನಗದು ಹಿಂಪಡೆಯಲು ಸ್ವಯಂಚಾಲಿತ ಟೆಲ್ಲರ್ ಯಂತ್ರಗಳಲ್ಲಿ ("ಎಟಿಎಂಗಳು") ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು

ಬಳಸಬಹುದು. ಇವು ತೆರೆದ ಲೂಪ್ ಕಾರ್ಡುಗಳು ಮತ್ತು ಇವುಗಳನ್ನು ಎಟಿಎಂನಲ್ಲಿ ನಗದು ಹಿಂತೆಗೆದುಕೊಳ್ಳುವಿಕೆಗೆ ಬಳಸಬಹುದು.

ಐ) ಯಸ್ ಬ್ಯಾಂಕ್ ಯಾವುದೇ ಸಮಯದಲ್ಲಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಉಳಿದಿರುವ ಯಾವುದೇ ಉಳಿಕೆ ಮೊತ್ತ(ಬ್ಯಾಲೆನ್ಸ್)ದ ಮೇಲೆ ಯಾವುದೇ ಬಡ್ಡಿ ಪಾವತಿಸಲು ಜವಾಬ್ದಾರನಾಗಿರುವುದಿಲ್ಲ.
ಜೆ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ನ ಮುಕ್ತಾಯಕ್ಕೆ 45 ದಿನಗಳ ಮೊದಲು ಯಸ್ ಬ್ಯಾಂಕ್ ಗ್ರಾಹಕರ ನೋಂದಾಯಿತ ಮೊಬೈಲ್ ಸಂಖ್ಯೆಯಲ್ಲಿ ಎಸ್.ಎಂ.ಎಸ್ ಮೂಲಕ ಗ್ರಾಹಕರಿಗೆ ಮಾಹಿತಿ ನೀಡುತ್ತದೆ ಅಥವಾ ಸಂಪರ್ಕಿಸುತ್ತದೆ. ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಮುಕ್ತಾಯಕ್ಕೆ ಮುಂಚಿತವಾಗಿ ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಲಭ್ಯವಿರುವ ಸಂಪೂರ್ಣ ಕ್ರೆಡಿಟ್ ಬ್ಯಾಲೆನ್ಸ್ ಅನ್ನು ಬಳಸಿಕೊಳ್ಳಬೇಕು. ಗ್ರಾಹಕರು ಜಿಪಿ ಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಸಿಂಧುತ್ವ ಅವಧಿಯೊಳಗೆ ಲಭ್ಯವಿರುವ ಕ್ರೆಡಿಟ್ ಬ್ಯಾಲೆನ್ಸ್ ಅನ್ನು ಬಳಸದಿದ್ದಲ್ಲಿ, ಗ್ರಾಹಕನು ಯಸ್ ಬ್ಯಾಂಕ್ ಅಥವಾ ಗ್ರಾಹಕನ ಇತರ ಯಾವುದೇ ಬ್ಯಾಂಕ್  ಖಾತೆಗೆ ಉಳಿಕೆ ಮೊತ್ತವನ್ನು ಮರುಪಾವತಿ / ವರ್ಗಾವಣೆಗಾಗಿ ಯಸ್ ಬ್ಯಾಂಕಿಗೆ ಸಂಪರ್ಕಿಸಬಹುದು. ಗ್ರಾಹಕನು ಯಸ್ ಬ್ಯಾಂಕನ್ನು ನಿಗದಿತ ಅವಧಿಗೆ ಸಂಪರ್ಕಿಸದಿದ್ದಲ್ಲಿ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಲಭ್ಯವಿರುವ ಉಳಿಕೆ ಮೊತ್ತವನ್ನು ನಿಯಂತ್ರಣ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಒಂದು ಧನರಾಶಿ(ಫಂಡ್)ಗೆ ವರ್ಗಾವಣೆ ಮಾಡಲಾಗುತ್ತದೆ.

## IV. ಕಾರ್ಡಿನ ನೀಡುವಿಕೆ ಮತ್ತು ಬಳಕೆ

ಎ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಗ್ರಾಹಕರಿಗೆ ತಲುಪಿಸಲು ಅಥವಾ ಅದನ್ನು ಗ್ರಾಹಕರಿಗೆ ತಲುಪಿಸುವವರಿಗೆ ಕೊಡಲು ಗ್ರಾಹಕರು ಯಸ್ ಬ್ಯಾಂಕಿಗೆ ಬೇಷರತ್ತಾಗಿ ಮತ್ತು ಮಾರ್ಪಡಿಸಲಾಗದ ಅಧಿಕಾರವನ್ನು ನೀಡಿರುತ್ತಾರೆ. ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಗ್ರಾಹಕನಿಗೆ ವಿತರಿಸುವುದರಲ್ಲಿ, ವಿತರಕರಿಂದ ಆಗಬಹುದಾದ ಯಾವುದೇ ಕಾರ್ಯ ಅಥವಾ ಕ್ರಿಯಾ ಲೋಪಕ್ಕೆ ಯಸ್ ಬ್ಯಾಂಕ್ ಜವಾಬ್ದಾರ ಆಗಿರುವುದಿಲ್ಲ.

ಬಿ) ಯಸ್ ಬ್ಯಾಂಕ್ ಮತ್ತು ವ್ಯಾಪಾರಿ ಸಂಸ್ಥೆಗಳು, ಗ್ರಾಹಕರಿಗೆ ಯಾವುದೇ ಪೂರ್ವ ಸೂಚನೆ ಇಲ್ಲದೇ, ಯಾವುದೇ ಕಾರಣಗಳಿಗಾಗಿ ಯಾವುದೇ ಸಮಯದಲ್ಲಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಸ್ವೀಕಾರವನ್ನು ನಿರಾಕರಿಸುವ ಹಕ್ಕನ್ನು ಕಾಯ್ದಿರಿಸಿವೆ.

ಸಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ವೈಯಕ್ತಿಕ ಅಥವಾ ಅಧಿಕೃತ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗುತ್ತದೆ. ವಿಧಿಸುವ ಶುಲ್ಕಗಳು, ಕೆಲವು ವ್ಯಾಪಾರೀ ಸಂಸ್ಥೆಗಳ ಸಂದರ್ಭದಲ್ಲಿ, ಅಂತಹ ಮರ್ಚೆಂಟ್

ಸಂಸ್ಥೆಗಳಿಂದ ಒದಗಿಸಲಾದ ಕೆಲವು ಹೆಚ್ಚುವರಿ ಸೇವೆ ಅಥವಾ ಇತರ ಸೌಕರ್ಯವನ್ನು ಪಡೆದುಕೊಳ್ಳಲು ಅವುಗಳು ವಿಧಿಸುವ ಶುಲ್ಕವನ್ನೂ ಒಳಗೊಂಡಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ಡಿ) ಗ್ರಾಹಕನು ವ್ಯಾಪಾರೀ ಸಂಸ್ಥೆಯಲ್ಲಿ ನಡೆಸಿದ ಪ್ರತಿ ವಹಿವಾಟಿಗೆ ಪಡೆಯುವ ಎಲ್ಲಾ ಚಾರ್ಜ್ ಸ್ಲಿಪ್‌ಗಳನ್ನು ಸಹಿ ಮಾಡಬೇಕು ಮತ್ತು ಉಳಿಸಿಕೊಳ್ಳಬೇಕು. ಗ್ರಾಹಕರಿಗೆ ಚಾರ್ಜ್ ಸ್ಲಿಪ್‌ಗಳು ಅಥವಾ ವಹಿವಾಟು ಸ್ಲಿಪ್‌ಗಳ ಪ್ರತಿಗಳನ್ನು ಒದಗಿಸುವಂತೆ ಬ್ಯಾಂಕ್ ಅನ್ನು ಒತ್ತಾಯಿಸುವಂತಿಲ್ಲ. ಗ್ರಾಹಕರಿಂದ ಅಂತಹ ಯಾವುದೇ ವಿನಂತಿಯು, ವ್ಯವಹಾರದ ದಿನಾಂಕದಿಂದ ನಲವತ್ತೈದು (45) ದಿನಗಳ ಒಳಗಾಗಿ ಗ್ರಾಹಕರು ಇಂತಹ ವಿನಂತಿಗಳನ್ನು ನೀಡಿದ್ದಲ್ಲಿ ಅದು ಯಸ್ ಬ್ಯಾಂಕಿನ ಪೂರ್ತಿ ವಿವೇಚನೆಗೆ ಒಳಪಟ್ಟಿರುತ್ತದೆ. ಚಾರ್ಜ್ ಅಥವಾ ವ್ಯವಹಾರದ ಸ್ಲಿಪ್‌ಗಳ ಪ್ರತಿಗಳನ್ನು ಒದಗಿಸುವುದಕ್ಕಾಗಿ ಹೆಚ್ಚುವರಿ ವೆಚ್ಚ ಅಥವಾ ಶುಲ್ಕವನ್ನು ವಿಧಿಸಲು ಯಸ್ ಬ್ಯಾಂಕಿಗೆ ಹಕ್ಕಿದೆ ಎಂದು ಗ್ರಾಹಕರು ಒಪ್ಪುತ್ತಾರೆ.

ಇ) ಯಾವುದೇ ವಹಿವಾಟುಗೆ ಸಂಬಂಧಿಸಿದಂತೆ ವ್ಯಾಪಾರೀ ಸಂಸ್ಥೆ(ಮರ್ಚೆಂಟ್ ಎಸ್ಟಾಬ್ಲಿಷ್ಮೆಂಟ್)ಯಿಂದ ವಿಧಿಸಲ್ಪಡುವ ಯಾವುದೇ ಶುಲ್ಕ ಅಥವಾ ವೆಚ್ಚವನ್ನು ಗ್ರಾಹಕರು ನೇರವಾಗಿ ವ್ಯಾಪಾರೀ ಸಂಸ್ಥೆಯ ಮೂಲಕ ಇತ್ಯರ್ಥಗೊಳಿಸಬೇಕು. ವ್ಯಾಪಾರೀ ಸಂಸ್ಥೆಯ ಕಡೆಯಿಂದ ಯಾವುದೇ ವ್ಯವಹಾರಕ್ಕಾಗಿ ಅಥವಾ ವಹಿವಾಟಿಗೆ ಸಂಬಂಧಿಸಿದಂತೆ ಸಂಸ್ಥೆ ವಿಧಿಸಿದ ಶುಲ್ಕಗಳು ಅಥವಾ ವೆಚ್ಚಗಳಿಗೆ ಯಸ್ ಬ್ಯಾಂಕ್ ನೇರವಾಗಿ ಅಥವಾ ಪರೋಕ್ಷವಾಗಿ ಹೊಣೆಗಾರನಾಗಿರುವುದಿಲ್ಲ.

ಎಫ್) ಸಾಧನ ದೋಷ ಅಥವಾ ಸಂವಹನದ ಲಿಂಕ್‌ನ ಕಾರಣದಿಂದಾಗಿ ಯಾವುದೇ ವ್ಯಾಪಾರೀ ಸಂಸ್ಥೆಗಳಿಂದ ಬರಬೇಕಾದ ಎಲ್ಲಾ ಮರುಪಾವತಿಗಳು ಮತ್ತು ಹೊಂದಾಣಿಕೆಗಳನ್ನು ಕೈಯಾರೆ ಪ್ರಕ್ರಿಯೆಗೊಳಿಸಲಾಗುವುದು ಮತ್ತು ಯಸ್ಬ್ಯಾಂಕಿಗೆ ಅನುಗುಣವಾದ ನಿಯಮಗಳು, ನಿಯಂತ್ರಣ ಮತ್ತು ಆಂತರಿಕ ನೀತಿಗೆ ಅನುಗುಣವಾಗಿ ಯಸ್ ಬ್ಯಾಂಕಿನಿಂದ ಪರಿಶೀಲನೆಯ ನಂತರ ಕಾರ್ಡ್ ಖಾತೆಗೆ ಜಮಾ ಮಾಡಲಾಗುತ್ತದೆ. ಯಸ್ ಬ್ಯಾಂಕಿನ ಪರಿಗಣನೆಯಲ್ಲಿರುವ ಯಾವುದೇ ವಿವಾದಿತ ಮೊತ್ತವನ್ನು ಪರಿಗಣಿಸದೇ, ನಂತರದ  ಯಾವುದೇ ವಹಿವಾಟುಗಳಿಗೆ ಕಾರ್ಡ್ ಖಾತೆ (ಗಳು) ನಲ್ಲಿ ಲಭ್ಯವಿರುವ ಮೊತ್ತವನ್ನು ಮಾತ್ರ ಅಂಗೀಕರಿಸಲಾಗುತ್ತದೆ ಅಥವಾ ಗೌರವಿಸಲಾಗುತ್ತದೆ ಎಂದು ಗ್ರಾಹಕರು ಒಪ್ಪುತ್ತಾರೆ. ಕಾರ್ಡ್ ಖಾತೆಯಲ್ಲಿ ಸಾಕಷ್ಟು ಹಣವಿರದ ಕಾರಣದಿಂದ ಪಾವತಿ ಸೂಚನೆಗಳನ್ನು ತಿರಸ್ಕರಿಸುವ ಮೂಲಕ ಯಸ್ ಬ್ಯಾಂಕಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಗ್ರಾಹಕರು ಯಸ್ ಬ್ಯಾಂಕಿಗೆ ಬೇಷರತ್ತಾಗಿ ನಷ್ಟ ತುಂಬಿ ಕೊಡಬೇಕು. ಅಂತಹ ನಷ್ಟದ ಮೊತ್ತವನ್ನು ಕಾರ್ಡ್ ಖಾತೆಯಿಂದ ನೇರವಾಗಿ ಕಡಿತಗೊಳಿಸಲು ಯಸ್ ಬ್ಯಾಂಕಿಗೆ ಹಕ್ಕಿದೆ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

ಜಿ) ಗ್ರಾಹಕರು ಇತರ ಯಾವುದೇ ಪಾವತಿ ಸಲಕರಣೆಗಳನ್ನು ಬಳಸಿ ವಿಫಲವಾದ, ಹಿಂದಿರುಗಿದ, ತಿರಸ್ಕರಿಸಿದ ಅಥವಾ ರದ್ದುಗೊಳಿಸಿದ ಎಲ್ಲಾ ಮರುಪಾವತಿಗಳನ್ನು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಕ್ರೆಡಿಟ್ ಮಾಡಲಾಗುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಂಡಿದ್ದಾರೆ.

ಹೆಚ್) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಎಲ್ಲಾ ವ್ಯವಹಾರಗಳಿಗೆ ಎಲ್ಲಾ ಸಮಯದಲ್ಲೂ ವಿಶ್ವಾಸದಿಂದ ಕರ್ತವ್ಯ ನಿರ್ವಹಿಸಲು ಕಾರ್ಡ್ ಸದಸ್ಯನು ಒಪ್ಪುತ್ತಾನೆ. ಇಲ್ಲಿ ಒಳಗೊಂಡಿರುವ ನಿಬಂಧನೆಗಳು ಮತ್ತು ಷರತ್ತುಗಳಿಗೆ ವ್ಯತಿರಿಕ್ತವಾಗಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಯಾವುದೇ ಕಾನೂನುಬಾಹಿರ ಅಥವಾ ತಪ್ಪು ಬಳಕೆಗೆ ಸಂಬಂಧಿಸಿದಂತೆ ಗ್ರಾಹಕನು ಸಂಪೂರ್ಣ ಜವಾಬ್ದಾರಿಯನ್ನು ಸ್ವೀಕರಿಸುತ್ತಾನೆ ಮತ್ತು ಗ್ರಾಹಕನು ಇಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಯಾವುದೇ ಉಲ್ಲಂಘನೆ ಮಾಡುವ ಪರಿಣಾಮವಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಬ್ಯಾಂಕಿಗೆ ಉಂಟಾಗಬಹುದಾದ ಮತ್ತು / ಅಥವಾ ಅನುಭವಿಸಬಹುದಾದ ಯಾವುದೇ ನಷ್ಟ, ಹಾನಿ, ಬಡ್ಡಿ, ಪರಿವರ್ತನೆ ಮತ್ತು ಯಾವುದೇ ಇತರ ಹಣಕಾಸಿನ ಶುಲ್ಕವನ್ನು ಯಸ್ ಬ್ಯಾಂಕಿಗೆ ನಷ್ಟ ಭರಿಸುವುದಕ್ಕೆ ಗ್ರಾಹಕನು ವಾಗ್ದಾನ ಮಾಡುತ್ತಾನೆ ಮತ್ತು ಒಪ್ಪುತ್ತಾನೆ.

ಐ) ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಕಾನೂನುಬಾಹಿರವಾದ ಯಾವುದೇ ಸರಕು ಮತ್ತು ಸೇವೆಗಳ ಪಾವತಿಯನ್ನು (ಗಳನ್ನು) ಮಾಡಲು ಅವನು / ಅವಳು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಬಳಸುವುದಿಲ್ಲ ಎಂದು ಗ್ರಾಹಕರು ಒಪ್ಪುತ್ತಾರೆ. ನಿಷೇಧಿತ ಅಥವಾ ಕಳ್ಳಸಾಗಣೆಯ ಉತ್ಪನ್ನಗಳು ಅಥವಾ ಸೇವೆಗಳ ಖರೀದಿಗಳನ್ನು ಮಾಡಲು, ಉದಾ. ಲಾಟರಿ ಟಿಕೆಟ್‌ಗಳು, ಪ್ರತಿಬಂಧಿತ ಅಥವಾ ನಿಷೇಧಿತ ನಿಯತಕಾಲಿಕೆಗಳು, ಹಣ ದ್ವಿಗುಣಗೊಳಿಸುವುದಾಗಿ ನಂಬಿಸುವ ಚಟುವಟಿಕೆಗಳಲ್ಲಿ(ಸ್ವೀಪ್‌ಸ್ಟೇಕ್‌ಗಳು) ಪಾಲ್ಗೊಳ್ಳುವಿಕೆ, ಬಿಟ್‌ಕಾಯಿನ್‌ಗಳ ಖರೀದಿ, ಹಿಮ್ಮುಖ-ಕರೆ(ಕಾಲ್-ಬ್ಯಾಕ್) ಸೇವೆಗಳಿಗೆ ಪಾವತಿ, ಇತ್ಯಾದಿಗಳಿಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಬಳಸಲಾಗುವುದಿಲ್ಲ.

ಜೆ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಯಸ್ ಬ್ಯಾಂಕಿನಿಂದ ರೂ. 50,000 (ರೂ. ಐವತ್ತು ಸಾವಿರ ಮಾತ್ರ)ಕ್ಕಿಂತ ಮಿಗಿಲಾದ ಮೊತ್ತಕ್ಕೆ ಲೋಡ್ ಅಥವಾ ಮರುಲೋಡ್ ಮಾಡಲಾಗುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

ಕೆ) ಜಿಪಿಆರ್ ಪ್ರಿಪೇಯ್ಡ್ ಕಾರ್ಡಿನ ಸಿಂಧುತ್ವಕ್ಕೆ ಅನುಗುಣವಾಗಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಒಂದು (1) ವರ್ಷದ ಸತತ ಅವಧಿಗೆ ವಹಿವಾಟು ಇಲ್ಲದಿದ್ದರೆ, ಗ್ರಾಹಕನಿಗೆ ನೋಟೀಸ್ ಕಳುಹಿಸಿದ ನಂತರ ಬ್ಯಾಂಕ್ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ನಿಷ್ಕ್ರಿಯಗೊಳಿಸುತ್ತದೆ ಎಂಬುದನ್ನು ಗ್ರಾಹಕರು ಸ್ವೀಕರಿಸುತ್ತಾರೆ ಮತ್ತು ಒಪ್ಪುತ್ತಾರೆ. ಕಾಲಕಾಲಕ್ಕೆ ಯಸ್ ಬ್ಯಾಂಕಿನಿಂದ ನಿರ್ಧರಿಸಲ್ಪಟ್ಟಂತೆ ಯೆಸ್ ಬ್ಯಾಂಕಿನಿಂದ ಮೌಲ್ಯೀಕರಣಗೊಂಡು ಅದರ ಅವಶ್ಯಕವಾದ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಮಾತ್ರವೇ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಪುನಃ ಸಕ್ರಿಯಗೊಳಿಸಬಹುದು.

ಎಲ್) ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಸಿ ಮಾಡಿದ ಎಲ್ಲಾ ವಹಿವಾಟುಗಳಿಗೆ ಯಸ್ ಬ್ಯಾಂಕಿನಿಂದ ಎಸ್.ಎಂ.ಎಸ್ ಅಥವಾ ಇಮೇಲ್ ಎಚ್ಚರಿಕೆಗಳನ್ನು ಸ್ವೀಕರಿಸಲು ಸಮ್ಮತಿಸುತ್ತಾರೆ. ಎಸ್‌ಎಂಎಸ್ ಅಥವಾ ಇಮೇಲ್ ಎಚ್ಚರಿಕೆಗಳು ಗ್ರಾಹಕರ ಖರ್ಚು ಮತ್ತು ಜಮಾ ವಹಿವಾಟುಗಳು, ಜಿಪಿಆರ್ ಪ್ರಿಪೇಯ್ಡ್ ಕಾರ್ಡಿನಲ್ಲಿ ಲಭ್ಯವಿರುವ ಅಥವಾ ಉಳಿದಿರುವ ಮೊತ್ತ ಅಥವಾ ಯಸ್ ಬ್ಯಾಂಕ್ ಕಾಲಕಾಲಕ್ಕೆ ಗೊತ್ತುಪಡಿಸುವ ವಿವರಗಳನ್ನು ಸಮರ್ಪಕವಾಗಿ ಒದಗಿಸುತ್ತದೆ.

ಎಮ್) ಗ್ರಾಹಕರು ಯಾವುದೇ ಸಂಬಂಧಿ ಅಥವಾ ಕುಟುಂಬ ಸದಸ್ಯರು ಅಥವಾ ಮೂರನೇ ವ್ಯಕ್ತಿಗೆ ವೈಯಕ್ತಿಕ ಗುರುತಿನ ಸಂಖ್ಯೆ ("ಪಿನ್")ಯನ್ನು ಯಾವುದೇ ಸಂದರ್ಭಗಳಲ್ಲಿ ಬಹಿರಂಗಪಡಿಸಬಾರದೆಂಬುದನ್ನು ಒಪ್ಪುತ್ತಾರೆ ಮತ್ತು ದೃಢಪಡಿಸುತ್ತಾರೆ. ಗ್ರಾಹಕರು ಪಿನ್ ಮತ್ತು / ಅಥವಾ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಅನಧಿಕೃತ ಬಳಕೆಗೆ ಅಥವಾ ಅನಧಿಕೃತ ಬಹಿರಂಗಪಡಿಸುವಿಕೆಯಿಂದ ಉಂಟಾಗುವ ಪರಿಣಾಮಗಳಿಗೆ ತಾವೊಬ್ಬರೇ ಜವಾಬ್ದಾರಿ ಮತ್ತು ಹೊಣೆಗಾರರಾಗಿರುತ್ತಾರೆ. ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಅನಧಿಕೃತ ಬಳಕೆ ಮತ್ತು / ಅಥವಾ ಅಂತಹ ದುರುಪಯೋಗದ ಪರಿಣಾಮವಾಗಿ ಯಸ್ ಬ್ಯಾಂಕಿನಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾದ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ಯಸ್ ಬ್ಯಾಂಕಿನ ಎಲ್ಲಾ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಗ್ರಾಹಕರು ಅಲ್ಲಗೆಳೆಯುತ್ತಾರೆ. ಗ್ರಾಹಕರು ಪಿನ್ ಅನ್ನು ಮರೆತುಬಿಟ್ಟರೆ ಅಥವಾ ತಪ್ಪಾಗಿ ಬಳಸಿದರೆ, ತಕ್ಷಣವೇ ಒಂದು ಅರ್ಜಿಯನ್ನು ಬರೆದು ತಿಳಿಸಬೇಕು ಅಥವಾ ಹೊಸ ಗುರುತಿನ ಸಂಖ್ಯೆ(ಪಿನ್)ಗೆ ಗ್ರಾಹಕ ಸೇವಾ ಕೇಂದ್ರವನ್ನು ಸಂಪರ್ಕಿಸಬೇಕು. ಯಸ್ ಬ್ಯಾಂಕಿಗೆ ಒದಗಿಸಿದ ಅಥವಾ ಲಭ್ಯವಿರುವ ಗ್ರಾಹಕರ ನೋಂದಾಯಿತ ಇಮೇಲ್ ವಿಳಾಸಕ್ಕೆ ಹೊಸ ಗುರುತಿನ ಸಂಖ್ಯೆ(ಪಿನ್)ಯನ್ನು ಕಳುಹಿಸಲಾಗುವುದು.
ಎನ್) ಬ್ಯಾಂಕ್ ತನ್ನದೇ ಆದ ವಿವೇಚನೆಯಿಂದ, ಬಾಹ್ಯ ಸೇವಾ ಪೂರೈಕೆದಾರ/ರು ಅಥವಾ ಪ್ರತಿನಿಧಿ/ಗಳ ಸೇವೆಗಳನ್ನು, ಬ್ಯಾಂಕಿನ ಸೇವೆಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಅಥವಾ ಅವಶ್ಯಕವಾದಂತಹ ನಿಯಮಗಳ ಪ್ರಕಾರ ಬಳಸಿಕೊಳ್ಳಬಹುದು ಎಂಬುದನ್ನು ಗ್ರಾಹಕನು ಒಪ್ಪಿಕೊಳ್ಳುತ್ತಾನೆ.

ಒ) ಗ್ರಾಹಕರು ಕಾಲಕಾಲಕ್ಕೆ ಬ್ಯಾಂಕಿನ ವೆಬ್ ತಾಣದಲ್ಲಿ ಯಸ್ಬ್ಯಾಂಕಿನಿಂದ ಅಪ್ಲೋಡ್ ಮಾಡಲ್ಪಟ್ಟ ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳಿಗೆ ("ಎಫ್ಎಕ್ಯು") ಪ್ರವೇಶವನ್ನು ಹೊಂದಿರುತ್ತಾರೆ.

## V. ಉಲ್ಲಂಘನೆ

ಎ) ಗ್ರಾಹಕರಿಂದ ಈ ನಿಬಂಧನೆಗಳು ಮತ್ತು ಷರತ್ತುಗಳ ಯಾವುದೇ ಉಲ್ಲಂಘನೆಯಾದ ಸಂದರ್ಭದಲ್ಲಿ, ಯಸ್ ಬ್ಯಾಂಕಿನ ಮೇಲೆ ಯಾವುದೇ ಹೆಚ್ಚಿನ ಹಕ್ಕು, ಬೇಡಿಕೆ ಅಥವಾ ವಿವಾದವಿಲ್ಲದೇ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ರದ್ದುಗೊಳಿಸುವ ಅಥವಾ ಮುಕ್ತಾಯಗೊಳಿಸುವ ಸಂಪೂರ್ಣ ಹಕ್ಕನ್ನು ಯಸ್ ಬ್ಯಾಂಕ್ ಹೊಂದಿರುತ್ತದೆ.

ಬಿ) ಇಲ್ಲಿ ಒಳಗೊಂಡಿರುವ ನಿಬಂಧನೆಗಳು ಮತ್ತು ಷರತ್ತುಗಳ ಯಾವುದೇ ಉಲ್ಲಂಘನೆಯನ್ನು ಗ್ರಾಹಕರು ಮಾಡಿದ ಪರಿಣಾಮವಾಗಿ ಯಸ್ ಬ್ಯಾಂಕಿಗೆ *ನೇರವಾಗಿ ಅಥವಾ ಪರೋಕ್ಷವಾಗಿ* ಉಂಟಾಗಬಹುದಾದ ಮತ್ತು / ಅಥವಾ ಸಂಭವಿಸಬಹುದಾದ ಯಾವುದೇ ನಷ್ಟ, ಹಾನಿ, ಹಕ್ಕಿನ ಬೇಡಿಕೆ, ದಂಡ, ವೆಚ್ಚ, ಶುಲ್ಕಗಳು ಅಥವಾ ಖರ್ಚುಗಳನ್ನು (*ಕಾನೂನು ಸಲಹೆಯ ಶುಲ್ಕಗಳು ಸೇರಿದಂತೆ*) ಭರಿಸಲು ಗ್ರಾಹಕರು ವಾಗ್ದಾನ ಮಾಡುತ್ತಾರೆ ಮತ್ತು ಒಪ್ಪುತ್ತಾರೆ.

## VI. ಅವಧಿ ಮತ್ತು ಮುಕ್ತಾಯ

(ಎ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮುದ್ರಣ ದಿನಾಂಕದಿಂದ ಮೂರು (3) ವರ್ಷಗಳವರೆಗೆ ಅಥವಾ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮೇಲೆ ಮುದ್ರಿತ ಅವಧಿ ಮುಗಿಯುವವರೆಗೆ ಮಾನ್ಯವಾಗಿರುತ್ತದೆ.

(ಬಿ) ಯಾವುದೇ ಮೂರನೆಯ ವ್ಯಕ್ತಿಯು ಅದನ್ನು ಬಳಸದಂತೆ ತಡೆಯಲು ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಅವಧಿ ಮುಗಿದ ನಂತರ ನಾಶಗೊಳಿಸುವುದಕ್ಕೆ ಒಪ್ಪುತ್ತಾರೆ ಮತ್ತು ಕೈಗೊಳ್ಳುತ್ತಾರೆ.

(ಸಿ) ಗ್ರಾಹಕರು ಕಾರ್ಡ್ ಅನ್ನು ಹಾಟ್ ಲಿಸ್ಟಿಂಗ್ ಮಾಡುವಂತೆ ಅಥವಾ ಬ್ಲಾಕ್ ಮಾಡುವಂತೆ ವಿನಂತಿ ಮಾಡಿದ ಸಂದರ್ಭದಲ್ಲಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ತಕ್ಷಣವೇ ಮುಕ್ತಾಯಗೊಳ್ಳುತ್ತದೆ ಮತ್ತು / ಅಥವಾ ರದ್ದುಗೊಳ್ಳುತ್ತದೆ. ಇದನ್ನು ಹೊರತುಪಡಿಸಿ, ಯಸ್ ಬ್ಯಾಂಕಿಗೆ ಮೂವತ್ತು (30) ದಿನಗಳ ಮುಂಚಿನ ಲಿಖಿತ ಸೂಚನೆ ನೀಡುವ ಮೂಲಕ ಗ್ರಾಹಕರು ಯಾವುದೇ ಸಮಯದಲ್ಲಾದರೂ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಮುಕ್ತಾಯಗೊಳಿಸುವಂತೆ ಕೋರಬಹುದು.

(ಡಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಮೇಲ್ಭಾಗದ ಬಲ ಮೂಲೆಯಲ್ಲಿ ಕತ್ತರಿಸಿ, ಲಾಂಛನ(ಹೋಲೋಗ್ರಾಮ್) ಮತ್ತು ವಿದ್ಯುತ್ಕಾಂತೀಯ ಪಟ್ಟಿ(ಮ್ಯಾಗ್ನೆಟಿಕ್ ಸ್ಟ್ರಿಪ್)ಗಳೆರಡನ್ನೂ ಕತ್ತರಿಸಿ ನಾಶಪಡಿಸಲಾಗಿದೆ ಎಂದು ಖಾತ್ರಿಪಡಿಸುವವರೆಗೂ ಅಥವಾ ಕಾರ್ಡ್ ಅನ್ನು ಯಸ್ ಬ್ಯಾಂಕ್ ಮರಳಿ ಪಡೆಯುವವರೆಗೂ ಅಂತಹ ನೋಟೀಸ್ ಜಾರಿಗೆ ಬರುವುದಿಲ್ಲ ಎಂಬುದನ್ನು ಗ್ರಾಹಕರು ಅರ್ಥಮಾಡಿಕೊಳ್ಳುತ್ತಾರೆ. ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ನಾಶಪಡಿಸಿದ್ದರೂ ಅಥವಾ ನಾಶಪಡಿಸಿದ್ದೇವೆಂದು ಹೇಳಿದ್ದರೂ ಕೂಡಾ, ಗ್ರಾಹಕರು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮುಕ್ತಾಯಕ್ಕೆ ಮುಂಚಿತವಾಗಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಯಾವುದೇ ಶುಲ್ಕಗಳಿಗೆ ಹೊಣೆಗಾರರಾಗಿರುತ್ತಾರೆ ಎಂದು ಒಪ್ಪುತ್ತಾರೆ.

(ಇ) ಈ ಕೆಳಗಿನ ಸಂದರ್ಭಗಳಲ್ಲಿ ಯಸ್ ಬ್ಯಾಂಕ್, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ತನ್ನ ಸ್ವಂತ ವಿವೇಚನೆಯಿಂದ ಕೊನೆಗೊಳಿಸಬಹುದು-

(i) ಗ್ರಾಹಕನು ದಿವಾಳಿಯೆಂದು ಘೋಷಿಸಿದ ಸಂದರ್ಭದಲ್ಲಿ ಅಥವಾ ಗ್ರಾಹಕನ ಮರಣದ ಸಂದರ್ಭದಲ್ಲಿ

(ii) ಈ "ನಿಬಂಧನೆಗಳು ಮತ್ತು ಷರತ್ತುಗಳ" ಅಡಿಯಲ್ಲಿ ಯಾವುದೇ ನಿಯಮಗಳು, ಗೊತ್ತುವಳಿಗಳು, ಷರತ್ತುಗಳು ಅಥವಾ ಅದರ ಜವಾಬ್ದಾರಿಗಳನ್ನು ಗ್ರಾಹಕನು ಉಲ್ಲಂಘಿಸಿದ ಸಂದರ್ಭದಲ್ಲಿ

(iii) ಸಕ್ಷಮ ನ್ಯಾಯಾಲಯದ ಆದೇಶದ ಮೂಲಕ ಅಥವಾ ಭಾರತದಲ್ಲಿರುವ ಯಾವುದೇ ನಿಯಂತ್ರಣಾತ್ಮಕ ಅಥವಾ ಶಾಸನಬದ್ಧ ಅಧಿಕಾರ ಅಥವಾ ಯಾವುದೇ ತನಿಖಾ ಸಂಸ್ಥೆಯಿಂದ ಜಾರಿಗೊಳಿಸಲಾದ ಆದೇಶದ ಮೂಲಕ ಗ್ರಾಹಕರ ಮೇಲೆ ಹೇರಿರುವ ಯಾವುದೇ ನಿರ್ಬಂಧದ ಸಂದರ್ಭದಲ್ಲಿ.

(iv) ಅನ್ವಯವಾಗುವ ಕಾನೂನುಗಳು, ನಿಯಮಗಳು, ಮಾರ್ಗಸೂಚಿಗಳು ಅಥವಾ ಸುತ್ತೋಲೆಯ ಅಡಿಯಲ್ಲಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಾರ್ಯಕ್ರಮವು ಕಾನೂನುಬಾಹಿರ ಆದ ಸಂದರ್ಭದಲ್ಲಿ.
(v) ಇಡೀ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಾರ್ಯಕ್ರಮವನ್ನು ರದ್ದುಗೊಳಿಸಿದ ಸಂದರ್ಭದಲ್ಲಿ.

(ಎಫ್) ಯಸ್ ಬ್ಯಾಂಕ್, ತನ್ನ ಸ್ವಂತ ವಿವೇಚನೆಯಿಂದ, ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿನ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವ ಮತ್ತು / ಅಥವಾ ಯಾವುದೇ ಸೂಚನೆ ನೀಡದೇ ಅಥವಾ ಯಾವುದೇ ಕಾರಣವನ್ನು ನೀಡದೆಯೇ ಯಾವುದೇ ಸಮಯದಲ್ಲಿ ಜಿಪಿಆರ್ ಪ್ರಿಪೆಯ್ಡ್ ಕಾರ್ಡ್ ಅನ್ನು ಮುಕ್ತಾಯಗೊಳಿಸುವ ಹಕ್ಕನ್ನು ಕಾಯ್ದಿರಿಸಿದೆ. ತಾತ್ಕಾಲಿಕ ಹಿಂಪಡೆಯುವಿಕೆಗೆ ಸಂಬಂಧಿಸಿದಂತೆ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಜೋಡಿಸಲಾದ ಸವಲತ್ತುಗಳನ್ನು ಯಸ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಮರುಸ್ಥಾಪಿಸಲಿದೆ. ಶಾಶ್ವತ ಹಿಂಪಡೆಯುವಿಕೆಗೆ ಸಂಬಂಧಿಸಿದಂತೆ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಶಾಶ್ವತವಾಗಿ ರದ್ದುಗೊಳಿಸುವ ಹಕ್ಕನ್ನು ಯಸ್ ಬ್ಯಾಂಕ್ ಹೊಂದಿದೆ. ಆದಾಗ್ಯೂ, ಹಿಂಪಡೆಯುವಿಕೆಯು (ತಾತ್ಕಾಲಿಕ ಅಥವಾ ಶಾಶ್ವತ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಜೋಡಿಸಲಾದ ಎಲ್ಲಾ ಸೌಲಭ್ಯಗಳು, ಸವಲತ್ತುಗಳು ಮತ್ತು ಸೇವೆಗಳ ಸ್ವಯಂಚಾಲಿತ ಹಿಂಪಡೆಯುವಿಕೆಯನ್ನು ಒಳಗೊಂಡಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ. ಯಸ್ ಬ್ಯಾಂಕ್ ಸೂಚಿಸಿದ ಹೊರತಾಗಿ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ತಾತ್ಕಾಲಿಕ ಅಥವಾ ಶಾಶ್ವತ ಹಿಂಪಡೆಯುವಿಕೆಯನ್ನು ಮಾಡಿದಾಗ, ಅಂತಹ ಹಿಂಪಡೆಯುವಿಕೆಯು ಸಂಭವಿಸುವ ಮೊದಲು ಅನ್ವಯವಾಗುವ ಎಲ್ಲ ಶುಲ್ಕಗಳ ಜೊತೆಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮೇಲೆ ವಿಧಿಸಿದ ಎಲ್ಲಾ ಶುಲ್ಕಗಳಿಗೆ ಗ್ರಾಹಕರು ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
(ಜಿ)ಒಂದು ವೇಳೆ ಯಸ್ ಬ್ಯಾಂಕ್ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ, ಸೌಲಭ್ಯಗಳನ್ನು ಹಿಂಪಡೆದರೆ ಅಥವಾ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಮುಕ್ತಾಯಗೊಳಿಸಿದರೆ, ಯಸ್ ಬ್ಯಾಂಕ್ ತನ್ನ ಉತ್ತಮ ಪ್ರಯತ್ನದ ಮೂಲಕ ಗ್ರಾಹಕರಿಗೆ ಕೂಡಲೇ ಸೂಚನೆ ನೀಡುತ್ತದೆ. ಅಂತಹ ಅಧಿಸೂಚನೆಯನ್ನು ಸ್ವೀಕರಿಸುವಲ್ಲಿ ಆಗಬಹುದಾದ ಯಾವುದೇ ವಿಳಂಬಗಳು ಅಥವಾ ಅಡಚಣೆಗೆ ಯಸ್ ಬ್ಯಾಂಕ್ ಹೊಣೆಗಾರರಾಗಿರುವುದಿಲ್ಲ ಅಥವಾ ಜವಾಬ್ದಾರರಾಗಿರುವುದಿಲ್ಲ.

(ಹೆಚ್) ಮೇಲೆ ಹೇಳಿದಂತೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡಿನ ಮುಕ್ತಾಯದ ನಂತರ, ಕಾರ್ಡ್ ಖಾತೆಯಲ್ಲಿರುವ ಮೊತ್ತವನ್ನು, ಅನ್ವಯವಾಗುವ ಶುಲ್ಕಗಳನ್ನು ಪಾವತಿಸಿದ ನಂತರ ಗ್ರಾಹಕರ ಹೆಸರಿಗೆ ಪೇ ಆರ್ಡರ್ / ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಲಾಗುತ್ತದೆ. ಮರುಪಾವತಿಗಾಗಿ ಗ್ರಾಹಕರು ಯಸ್ ಬ್ಯಾಂಕಿಗೆ ವಿನಂತಿಯನ್ನು ಸಲ್ಲಿಸಬೇಕು.

## VII. ಸೂಚನೆಗಳು

ಯಸ್ ಬ್ಯಾಂಕಿನಿಂದ ನೀಡಲಾಗುವ ಯಾವುದೇ ಸೂಚನೆಯನ್ನು, ಗ್ರಾಹಕರು ಬ್ಯಾಂಕಿಗೆ ಒದಗಿಸಿದ ಅಥವಾ ಬ್ಯಾಂಕಿನಲ್ಲಿ ಲಭ್ಯವಿರುವ ನೋಂದಾಯಿತ ಇಮೇಲ್ ಅಥವಾ ಮೈಲಿಂಗ್ ವಿಳಾಸಕ್ಕೆ ಯಸ್ ಬ್ಯಾಂಕ್ ಕಳುಹಿಸಿದ ದಿನಾಂಕದಿಂದ ಏಳು (7) ದಿನಗಳ ಒಳಗಾಗಿ ಗ್ರಾಹಕರು ಪಡೆದಿದ್ದಾರೆಂದು ಪರಿಗಣಿಸಲಾಗುವುದು.

ಗ್ರಾಹಕರು ನೀಡುವ ಯಾವುದೇ ಸೂಚನೆಯನ್ನು ಯಸ್ ಬ್ಯಾಂಕಿನ ಕಾರ್ಪೊರೇಟ್ ಕಚೇರಿ ವಿಳಾಸವಾದ ,22 ನೇ ಮಹಡಿ, ಇಂಡಿಯಾಬುಲ್ಸ್ ಫೈನಾನ್ಷಿಯಲ್ ಸೆಂಟರ್, ಸೇನಾಪತಿ ಬಾಪಟ್ ಮಾರ್ಗ್, ಎಲ್ಫಿನ್ಸ್ಟೋನ್ (ಪಶ್ಚಿಮ),ಮುಂಬೈ - 400013 ನಲ್ಲಿನ ಬ್ಯಾಂಕಿನ ಅಂಗೀಕಾರದ ಸ್ವೀಕೃತಿಯ ಮೇರೆಗೆ ಯಸ್ ಬ್ಯಾಂಕಿನಿಂದ ಸ್ವೀಕರಿಸಲ್ಪಟ್ಟಿದೆ ಎಂದು ಪರಿಗಣಿಸಲಾಗುತ್ತದೆ.

ಗ್ರಾಹಕರಿಂದ ಯಾವುದೇ ಸೂಚನೆ ಅಥವಾ ಸಂವಹನವು, ಅದು ಲಿಖಿತ ರೂಪದಲ್ಲಿರದ ಹೊರತು ಮತ್ತು ಯಸ್ ಬ್ಯಾಂಕಿನಿಂದ ನೋಂದಾಯಿತ ಅಂಚೆ, ಸ್ವೀಕೃತಿ ಕಾರ್ಡ್ ಮೂಲಕ ನೀಡಿ ಅಂಗೀಕರಿಸಲ್ಪಡದ ಹೊರತು ಯಸ್ ಬ್ಯಾಂಕಿನ ಹೊಣೆಗಾರಿಕೆಗೆ ಒಳಪಡುವುದಿಲ್ಲ.

**VIII. ಶುಲ್ಕಗಳು**

ಎ) ಶುಲ್ಕಗಳು ಇವನ್ನು ಒಳಗೊಂಡಿರುತ್ತವೆ:

(ಎ) ಬದಲಿ ಕಾರ್ಡ್, ನವೀಕರಣ, ನಿರ್ವಹಣೆ ಮತ್ತು ಇತರ ಶುಲ್ಕಗಳು,ಇತ್ಯಾದಿಯನ್ನು ಒಳಗೊಂಡು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಯಸ್ ಬ್ಯಾಂಕಿನಿಂದ ವಿಧಿಸಲಾದ ಯಾವುದೇ ಶುಲ್ಕಗಳು. ಈ ಶುಲ್ಕಗಳನ್ನು ಮರುಪಾವತಿಸಲಾಗುವುದಿಲ್ಲ, ವರ್ಗಾವಣೆಗೊಳಿಸಲಾಗುವುದಿಲ್ಲ ಮತ್ತು ಅವುಗಳು ಹಂಚಿಕೊಳ್ಳಗಾಗದಂತಹ ಸ್ವರೂಪದಲ್ಲಿರುತ್ತವೆ.

(ಬಿ) ನಿರ್ದಿಷ್ಟ ವಿಧದ ವಹಿವಾಟುಗಳ ಮೇಲೆ ವಿಧಿಸುವ ಸೇವಾ ಶುಲ್ಕಗಳು. ಅಂತಹ ಶುಲ್ಕಗಳನ್ನು ಲೆಕ್ಕ ಹಾಕುವ ವಿಧಾನವನ್ನು ಕಾಲಕಾಲಕ್ಕೆ ಯಸ್ ಬ್ಯಾಂಕಿನಿಂದ ತನ್ನ ವೆಬ್‌ತಾಣ www.yesbank.in ಮೂಲಕ ಸೂಚಿಸಲಾಗುತ್ತದೆ.

ಬಿ) ಎಲ್ಲಾ ಶುಲ್ಕಗಳು, ಪ್ರಕಟಣೆಯ ದೋಷದ ಅನುಪಸ್ಥಿತಿಯಲ್ಲಿ, ಅಂತಿಮ ಮತ್ತು ಗ್ರಾಹಕರಿಗೆ ಅನ್ವಯವಾಗುವ ಶುಲ್ಕಗಳಾಗಿವೆ ಮತ್ತು ಸ್ವರೂಪದಲ್ಲಿ ನಿರ್ಣಾಯಕವಾಗಿವೆ.

ಸಿ) ಎಲ್ಲ ಶಾಸನಬದ್ಧ ತೆರಿಗೆಗಳು, ಸರಕು ಮತ್ತು ಸೇವಾ ತೆರಿಗೆ, ಎಲ್ಲಾ ಇತರ ಕರಗಳು, ಸುಂಕಗಳು (ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಮುದ್ರಾ ಸುಂಕ ಮತ್ತು ಸಂಬಂಧಿತ ನೋಂದಣಿ ಶುಲ್ಕಗಳು, ಯಾವುದಾದರೂ ಇದ್ದರೆ) ಮತ್ತು ಸರ್ಕಾರ ಅಥವಾ ಇತರ ಪ್ರಾಧಿಕಾರದಿಂದ ಜಿಪಿಆರ್ ಪ್ರಿಪೇಯ್ಡ್

ಕಾರ್ಡ್‌ಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ವಿಧಿಸಬಹುದಾದ ತೆರಿಗೆಗಳನ್ನು(ಯಾವುದೇ ವಿವರಣೆಯ ಯಾವುದೇ ತೆರಿಗೆಗಳು)ಗ್ರಾಹಕರು ಭರಿಸಬೇಕಾಗುತ್ತದೆ.

## IX. ಹಣ ಹಿಂಪಡೆಯುವಿಕೆ

ಎ) ಗ್ರಾಹಕನು ಯಸ್ ಬ್ಯಾಂಕಿನ ಎಟಿಎಂ ಮತ್ತು ಸದಸ್ಯ ಬ್ಯಾಂಕಿನ ಎಟಿಎಂನಿಂದ ತುರ್ತು ನಗದು ಹಿಂಪಡೆಯುವಿಕೆಗಾಗಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಬಳಸಬಹುದು. ಆದರೂ, ಯಾವುದೇ ಸಮಯದಲ್ಲಿ ಹಿಂಪಡೆಯಬಹುದಾದ ಒಟ್ಟು ಮೊತ್ತವು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಲಭ್ಯವಿರುವ ಮೊತ್ತವನ್ನು ಅಥವಾ ಕಾಲಕಾಲಕ್ಕೆ ಭಾರತದ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯನ್ನು ಮೀರುವಂತಿಲ್ಲ.

## X. ಕಳೆದುಹೋದ, ಕಳವಾದ ಅಥವಾ ದುರುಪಯೋಗಗೊಂಡ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್:

ಎ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಳೆದುಹೋದರೆ ಅಥವಾ ಕಳವಾದರೆ, ಗ್ರಾಹಕರು ತಕ್ಷಣ ಇಂತಹ ನಷ್ಟ ಅಥವಾ ಕಳ್ಳತನವನ್ನು ಗ್ರಾಹಕರ ಸೇವಾ ಕೇಂದ್ರಕ್ಕೆ ವರದಿ ಮಾಡಬೇಕು ಮತ್ತು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ತಕ್ಷಣವೇ ಅಮಾನತುಗೊಳಿಸಲು ವಿನಂತಿಸಬೇಕು.

ಬಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಳೆದುಹೋದಾಗ, ಕಳುವಾದರೆ ಅಥವಾ ಹಾನಿಗೊಳಗಾಗಿದೆಯೆಂದು ಒಮ್ಮೆ ವರದಿ ಮಾಡಿದರೆ, ಅಂತಹ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು, ಅದು ನಂತರದಲ್ಲಿಸಿಕ್ಕಿದರೂ ಕೂಡಾ ಅದನ್ನು ಮತ್ತೆ ಬಳಸಲಾಗುವುದಿಲ್ಲ ಎಂಬುದನ್ನು ಗ್ರಾಹಕರು ಒಪ್ಪಿಕೊಂಡಿರಬೇಕು.

ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಸುರಕ್ಷತೆ ಗ್ರಾಹಕರ ಜವಾಬ್ದಾರಿಯಾಗಿದೆ ಮತ್ತು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ದುರ್ಬಳಕೆ ಮಾಡಲಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೇಲೆ ಸೂಚಿಸಿದಂತೆ ಕ್ರಮಗಳನ್ನು ಪಾಲಿಸಲು ಗ್ರಾಹಕರು ನಿರ್ಲಕ್ಷ್ಯ ವಹಿಸಿದ ಅಥವಾ ನಿರಾಕರಿಸಿದ ಅಥವಾ ತೆಗೆದುಕೊಳ್ಳಲು ವಿಫಲವಾಗಿದ್ದಾರೆಂಬ ಮಾಹಿತಿಯನ್ನು ಯಸ್ ಬ್ಯಾಂಕ್ ಪಡೆಯುತ್ತದೆ ಅಥವಾ ನಿರ್ಧರಿಸುತ್ತದೆ ಎಂದಾದಲ್ಲಿ, ಯಾವುದೇ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ನಷ್ಟ, ಕಳ್ಳತನ ಅಥವಾ ನಾಶ ಆದಲ್ಲಿ, ಯಸ್ ಬ್ಯಾಂಕ್ ಅಂತಹ ಜಿಪಿಆರ್ ಪ್ರಿಪೇಯ್ಡ್ ಕಾರ್ಡನ್ನು ರದ್ದು ಅಥವಾ ಕೊನೆಗೊಳಿಸಲು ಸಂಪೂರ್ಣ ಹಕ್ಕನ್ನು ಕಾಯ್ದಿರಿಸುತ್ತದೆ.

ಸಿ) ಗ್ರಾಹಕನಿಂದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಳೆದುಹೋಗಿದೆ, ಕಳವಾಗಿದೆ ಅಥವಾ ಹಾನಿಯಾಗಿದೆ ಎಂದು ವರದಿಯಾದ ನಂತರ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಆದ ಯಾವುದೇ ಅನಧಿಕೃತ ವಹಿವಾಟುಗಳಿಗೆ ಗ್ರಾಹಕರ ಮೇಲೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ಗ್ರಾಹಕರ ವರದಿಯ ನಂತರದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿನ ಎಲ್ಲಾ ಬಾಧ್ಯತೆಗಳು ಯಸ್ ಬ್ಯಾಂಕಿನಿಂದ ಭರಿಸಲ್ಪಡುತ್ತವೆ. ಆದಾಗ್ಯೂ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಳೆದುಹೋದ, ಕಳವಾದ ಅಥವಾ ದುರುಪಯೋಗಪಡಿಸಿಕೊಂಡ ವರದಿ

ಮಾಡಿದ ಮೇಲೂ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ವರದಿ ಮಾಡಿದ ಸಮಯ ಮತ್ತು / ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ವಿವಾದಗಳು ಇದ್ದ ಸಂದರ್ಭದಲ್ಲಿ, ಯಸ್ ಬ್ಯಾಂಕಿನ ಎಲ್ಲಾ ನಿರ್ಧಾರಗಳು ಅಂತಿಮ ಮತ್ತು ಗ್ರಾಹಕರ ಮೇಲೆ ಅನ್ವಯವಾಗುತ್ತವೆ.

## XI. ಹೊಣೆಗಾರಿಕೆಯ ನಿರಾಕರಣೆ

ಎ) ಮೇಲ್ಮನವಿಗೆ ಪೂರ್ವಾಗ್ರಹವಿಲ್ಲದೇ, ಗ್ರಾಹಕ ಅಥವಾ ಯಾವುದೇ ಮೂರನೇ ವ್ಯಕ್ತಿಗೆ ಈ ಕೆಳಗಿನವುಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗಬಹುದಾದ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ  ಯಸ್ ಬ್ಯಾಂಕ್ ಯಾವುದೇ ಹೊಣೆಗಾರಿಕೆ ಅಥವಾ ಜವಾಬ್ದಾರಿ ಹೊಂದಿರುವುದಿಲ್ಲ:

1. ಒದಗಿಸಿದ ಯಾವುದೇ ಸರಕು ಅಥವಾ ಸೇವೆಗಳಲ್ಲಿ ಇರಬಹುದಾದ ಯಾವುದೇ ದೋಷಗಳು
2. ಗುಣಮಟ್ಟ, ಮೌಲ್ಯ ಖಾತರಿ, ವಿತರಣೆಯ ವಿಳಂಬ, ವಿತರಣೆ ಅಗದೇ ಇರುವುದು, ಯಾವುದೇ ಸರಕು ಅಥವಾ ಸೇವೆಗಳ ಸ್ವೀಕೃತಿ ಆಗದೇ ಇರುವ ಸಂಬಂಧದ ಬಗ್ಗೆ ಇರುವ ಯಾವುದೇ ವಿವಾದಗಳು;
3. ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಮಾನ್ಯ ಮಾಡಲು ಅಥವಾ ಸ್ವೀಕರಿಸಲು ಯಾವುದೇ ವ್ಯಕ್ತಿಯ ನಿರಾಕರಣೆ
4. ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಯಾವುದೇ ಕಾರಣಕ್ಕಾಗಿ ಅಪೇಕ್ಷಿತ ರೀತಿಯಲ್ಲಿ ಕಾರ್ಯ ನಿರ್ವಹಿಸದಿದ್ದರೆ ಅಥವಾ ಎಟಿಎಂ ಯಾವುದೇ ಕಾರಣಗಳಿಂದಾಗಿ ಕಾರ್ಯನಿರ್ವಹಿಸದಿದ್ದರೆ
5. ಯಾವುದೇ ಕಂಪ್ಯೂಟರ್ ಟರ್ಮಿನಲ್‌ನ ಅಸಮರ್ಪಕ ಕಾರ್ಯ
6. ಯಾವುದೇ ಫೋರ್ಸ್ ಮೆಜೂರ್ ಘಟನೆಗಳು
7. ಯಾವುದೇ ಮೂರನೇ ವ್ಯಕ್ತಿಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ವರ್ಗಾವಣೆ.

8. ಗ್ರಾಹಕರಿಂದ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನ ಅಂತ್ಯಗೊಳಿಸುವಿಕೆ.
9. ಜಿಎಸ್‌ಆರ್ ಪ್ರಿಪೇಯ್ಡ್ ಕಾರ್ಡ್ ಅನ್ನು ಯೆಸ್ ಬ್ಯಾಂಕ್ ಮರು ಸ್ವಾಧೀನಗೊಳಿಸಿದ ಕಾರಣದಿಂದಾಗಿ ತನಗೆ ನಷ್ಟ ಅಥವಾ ಹಾನಿ ಸಂಭವಿಸಿದೆಯೆಂದು ಅಪಾದಿಸುವ ಗ್ರಾಹಕನಿಗೆ ಉಂಟಾದ ನಷ್ಟ ಅಥವಾ ಹಾನಿ.
10. ಗ್ರಾಹಕನಿಂದ ಈ ನಿಟ್ಟಿನಲ್ಲಿ ಸೂಚನೆಗಳನ್ನು ಸ್ವೀಕರಿಸಿ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಒದಗಿಸಲಾದ ಮೊತ್ತದ ನಡುವಿನ ವ್ಯತ್ಯಾಸಗಳು.
11. ಗ್ರಾಹಕನ  ಕೋರಿಕೆಯ ಮೇರೆಗೆ ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ಯಾವುದೇ ವಹಿವಾಟಿನ ಹಿಂಚಲನೆ(ರಿವರ್ಸಲ್).

## XII. ವಿವಾದಾತ್ಮಕ ವಹಿವಾಟುಗಳು

ಎ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಕಳೆದುಹೋದ, ಕಳವಾದ ಅಥವಾ ಮೋಸದಿಂದ ದುರ್ಬಳಕೆ ಮಾಡಿದ ಕುರಿತು ಗ್ರಾಹಕರು ಸಾಕ್ಷ್ಯಾಧಾರ ಒದಗಿಸಿದ ಹೊರತಾಗಿ, ಯಾವುದೇ ಚಾರ್ಜ್ ಅಥವಾ ವಹಿವಾಟು ರಸೀತಿ(ಸ್ಲಿಪ್) ಅಥವಾ ಪಾವತಿಸಲು ಗ್ರಾಹಕರಿಂದ ಯಸ್ ಬ್ಯಾಂಕ್ ಸ್ವೀಕರಿಸಿದ ಇತರ ಪಾವತಿ ವಿನಂತಿಯು, ಅಂತಹ ಚಾರ್ಜ್‌ನ ನಿರ್ಣಾಯಕ ಪುರಾವೆಯಾಗುತ್ತದೆ.

ಬಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ಗೆ ಸಂಬಂಧಿಸಿದಂತೆ ಎಲ್ಲಾ ವಿವಾದಿತ ವಹಿವಾಟುಗಳನ್ನು, ವಿವಾದಿತ ವ್ಯವಹಾರದ ದಿನಾಂಕದಿಂದ ಹದಿನೈದು (15) ದಿನಗಳ ಒಳಗಾಗಿ ಯಸ್ ಬ್ಯಾಂಕಿನಿಂದ ನಿರ್ವಹಿಸಲ್ಪಡುವ ಗ್ರಾಹಕರ ಸೇವಾ ಕೇಂದ್ರದಲ್ಲಿ ದಾಖಲಿಸಬೇಕು. ವಿವಾದಿತ ವಹಿವಾಟಿನ ದಿನಾಂಕದಿಂದ 15 ದಿನಗಳ ನಂತರ ಯಾವುದೇ ವಿನಂತಿಯನ್ನು ಯಸ್ ಬ್ಯಾಂಕ್ ಅನುಮೋದಿಸುವುದಿಲ್ಲ ಎಂಬುದನ್ನು ಗ್ರಾಹಕರು ಒಪ್ಪಿಕೊಂಡಿದ್ದಾರೆ.

## XIII. ಸರಕು ಮತ್ತು ಸೇವೆಗಳ ಗುಣಮಟ್ಟ

ಎ) ಖರೀದಿಸಿದ ಯಾವುದೇ ಸರಕು ಅಥವಾ ಪಡೆದ ಯಾವುದೇ ಸೇವೆಗಳ ಬಗ್ಗೆ ಯಾವುದೇ ವ್ಯಾಪಾರಿ ಸಂಸ್ಥೆಗಳ ವಿರುದ್ಧ ಯಾವುದೇ ವಿವಾದ ಅಥವಾ ದೂರುಗಳನ್ನು ಗ್ರಾಹಕರು ನೇರವಾಗಿ ವ್ಯಾಪಾರಿ ಸಂಸ್ಥೆಗಳಿಂದ ಪರಿಹರಿಸಿಕೊಳ್ಳಬೇಕು.

## XIV. ಬಹಿರಂಗಪಡಿಸುವಿಕೆ

ಎ) ಗ್ರಾಹಕರು ಮತ್ತು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಕೆಗೆ ಸಂಬಂಧಿಸಿದ ಮಾಹಿತಿಯನ್ನುಇತರ ಯಾವುದೇ ಬ್ಯಾಂಕುಗಳು ಅಥವಾ ಹಣಕಾಸು ಅಥವಾ ಶಾಸನಬದ್ಧ ಅಥವಾ ನಿಯಂತ್ರಕ ಅಧಿಕಾರಿಗಳೊಂದಿಗೆ ಹಂಚಿಕೊಳ್ಳಲು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

ಬಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಬಳಕೆಗೆ ಸಂಬಂಧಪಟ್ಟ ಗ್ರಾಹಕರ ಯಾವುದೇ ಅಪರಾಧಗಳನ್ನು ಮತ್ತು / ಅಥವಾ ಕಾರ್ಡಿನ ಬಳಕೆಯ ಕುರಿತು ಯಸ್ ಬ್ಯಾಂಕ್ ಯಾವುದೇ ಇತರ ಬ್ಯಾಂಕುಗಳು ಅಥವಾ ಹಣಕಾಸು ಅಥವಾ ಶಾಸನಬದ್ಧ ಅಥವಾ ನಿಯಂತ್ರಕ ಅಧಿಕಾರಿಗಳಿಗೆ ವರದಿ ಮಾಡಬಹುದೆಂದು ಗ್ರಾಹಕರು ಅಂಗೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ಅಂತಹ ಬಹಿರಂಗಪಡಿಸುವಿಕೆಯ ವ್ಯಾಪ್ತಿಯನ್ನೂ ಒಳಗೊಂಡಂತೆ ಅಂತಹ ಬ್ಯಾಂಕ್‌ಗಳು ಅಥವಾ ಹಣಕಾಸು ಅಥವಾ ಶಾಸನಬದ್ಧ ಅಥವಾ ನಿಯಂತ್ರಕ

ಅಧಿಕಾರಿಗಳ ವಿವರಗಳನ್ನು ಗ್ರಾಹಕರಿಗೆ  ಬಹಿರಂಗಪಡಿಸಲು ಯಸ್ ಬ್ಯಾಂಕ್ ಅನ್ನು ನಿರ್ಬಂಧಿಸಲಾಗುವುದಿಲ್ಲ.

ಸಿ) ಯಸ್ ಬ್ಯಾಂಕಿನ ಗುಂಪಿನ ಕಂಪನಿಗಳು ಅಥವಾ ಅಂಗಸಂಸ್ಥೆಗಳೊಂದಿಗೆ ಗ್ರಾಹಕರ ವಿವರಗಳು ಮತ್ತು ಪಾವತಿ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ವಿನಿಮಯ, ಹಂಚಿಕೆ ಮಾಡಿಕೊಳ್ಳಲು ಅಥವಾ ಅದರ ಭಾಗವಾಗಲು ಯಸ್ ಬ್ಯಾಂಕ್ ಮತ್ತು ಅದರ ಪ್ರತಿನಿಧಿಗಳಿಗೆ ಗ್ರಾಹಕನು ಇಲ್ಲಿ ಅಧಿಕಾರ ನೀಡುತ್ತಾನೆ.

## XV. ಆಡಳಿತ ಕಾನೂನು ಮತ್ತು ವ್ಯಾಪ್ತಿ

ಎ) ಈ ನಿಬಂಧನೆಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಎಲ್ಲಾ ವಿವಾದಗಳು ಭಾರತದ ಕಾನೂನುಗಳಿಗೆ ಅನುಗುಣವಾಗಿ ನಿಯಂತ್ರಿಸಲ್ಪಡುತ್ತವೆ ಮತ್ತು ಮುಂಬೈ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಟ್ಟಿರುತ್ತವೆ.

## XVI. ಈ ನಿಬಂಧನೆಗಳು ಮತ್ತು ಷರತ್ತುಗಳನ್ನು ಬದಲಾಯಿಸುವ ಕುರಿತು

ಬಡ್ಡಿ ಶುಲ್ಕಗಳು ಅಥವಾ ದರಗಳು ಮತ್ತು ಲೆಕ್ಕಾಚಾರದ ವಿಧಾನಗಳು ಸೇರಿದಂತೆ ಆದರೆ ಅಷ್ಟಕ್ಕೇ ಸೀಮಿತವಾಗದೇ ಈ ನಿಬಂಧನೆಗಳು ಮತ್ತು ಷರತ್ತುಗಳು, ವೈಶಿಷ್ಟ್ಯಗಳು ಮತ್ತು ಜಿಪಿಆರ್ ಪ್ರಿಪೇಯ್ಡ್ ಕಾರ್ಡ್‌ನಲ್ಲಿ ನೀಡಲಾಗುವ ಪ್ರಯೋಜನಗಳನ್ನು ಬದಲಾಯಿಸುವ ಏಕೈಕ ಹಕ್ಕನ್ನು ಯಸ್ ಬ್ಯಾಂಕ್ ಹೊಂದಿದೆ.

ಎ) ಯಸ್ ಬ್ಯಾಂಕ್ ಅದರ ವೆಬ್‌ತಾಣ, www.Yesbank.in  ಮೂಲಕ, ಅಥವಾ ಯಸ್ ಬ್ಯಾಂಕ್ ನಿರ್ಧರಿಸಿದ ಯಾವುದೇ ರೀತಿಯ ಮೂಲಕ ತಿದ್ದುಪಡಿ ಮಾಡಿದ ನಿಬಂಧನೆಗಳು ಮತ್ತು ಷರತ್ತುಗಳನ್ನು ತಿಳಿಸುತ್ತದೆ.
ಬಿ) ಯಸ್ ಬ್ಯಾಂಕ್ ಅದರ ಜಾಲತಾಣ www.yesbank.in ನಲ್ಲಿ ಪ್ರಕಟಿಸಬಹುದಾದಂತಹ ತಿದ್ದುಪಡಿಗಳನ್ನು ಒಳಗೊಂಡಂತೆ ಈ ನಿಬಂಧನೆಗಳು ಮತ್ತು ಷರತ್ತುಗಳನ್ನು ಪರಿಶೀಲಿಸಲು ಗ್ರಾಹಕನು ಜವಾಬ್ದಾರನಾಗಿರುತ್ತಾನೆ  ಮತ್ತು ಗ್ರಾಹಕನು ಜಿಪಿಆರ್ ಪ್ರಿಪೇಯ್ಡ್ ಕಾರ್ಡನ್ನು ಬಳಸಲು ಮುಂದುವರಿಸುವುದರ ಮೂಲಕ ತಿದ್ದುಪಡಿಯಾದ ನಿಬಂಧನೆಗಳು ಮತ್ತು ಷರತ್ತುಗಳನ್ನು ಆತನು ಸ್ವೀಕರಿಸಿದಂತೆ ಪರಿಗಣಿಸಲಾಗುತ್ತದೆ.

## XVII. ದರಗಳ ಪಟ್ಟಿ

| ಶುಲ್ಕಗಳು | ಮೊತ್ತ |
|---|---|
| ಕಾರ್ಡ್ ವಿತರಣೆ | ಪ್ರತಿ ಕಾರ್ಡ್‌ಗೆ ರೂ. 200 |

| | |
|---|---|
| ಎಟಿಎಂ ನಗದು ಹಿಂತೆಗೆದುಕೊಳ್ಳುವಿಕೆ | ಐಎನ್ಆರ್ 20 |
| ಎಟಿಎಂ ಬ್ಯಾಲೆನ್ಸ್ ವಿಚಾರಣೆ | ಐಎನ್ಆರ್ 8 |
| ವಾರ್ಷಿಕ ಶುಲ್ಕಗಳು | ಐಎನ್ಆರ್ 200 |
| ಕಾರ್ಡ್ ಬದಲಾಯಿಸುವಿಕೆ | ಪ್ರತಿ ಕಾರ್ಡ್‌ಗೆ ಐಎನ್ಆರ್ 100 |

ಆದಾಗ್ಯೂ, ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮೂಲಕ ಮಾಡುವ ಯಾವುದೇ ವ್ಯವಹಾರದಿಂದ, ಅನ್ವಯಿಸುವ ಕಾನೂನುಗಳ ಅಡಿಯಲ್ಲಿ ಮಾಡಬೇಕಾಗಿರುವ, ಮೂಲದಿಂದ ಕಳೆಯಬಹುದಾದ ತೆರಿಗೆಯನ್ನು ಕಡಿತಗೊಳಿಸುವುದರಿಂದ ಯಸ್ ಬ್ಯಾಂಕ್ ಅನ್ನು ಇಲ್ಲಿ ಒಳಗೊಂಡಿರುವ ಯಾವ ನಿಯಮಗಳೂ ತಡೆಯುವುದಿಲ್ಲ.

## XVIII. ಗ್ರಾಹಕರ ಕುಂದುಕೊರತೆ ಪರಿಹಾರ

ಎ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮತ್ತು / ಅಥವಾ ಈ ನಿಬಂಧನೆಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದ ಅಥವಾ ದೂರು ಸಂದರ್ಭದಲ್ಲಿ, ಗ್ರಾಹಕರು ಯಸ್ ಬ್ಯಾಂಕ್ ಅನ್ನು 24 ಗಂಟೆಗಳ ಗ್ರಾಹಕ ಸೇವಾ ಸಂಖ್ಯೆ 18002000 ಮೂಲಕ ಅಥವಾ ಇಮೇಲ್: yestouch@yesbank.in ಮೂಲಕ ಸಂಪರ್ಕಿಸಬಹುದು.

ಬಿ) ಜಿಪಿಆರ್ ಪ್ರಿಪೇಯ್ಡ್ ಕಾರ್ಡ್ ಮತ್ತು / ಅಥವಾ ಈ ನಿಬಂಧನೆಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ವಿವಾದ ಅಥವಾ ದೂರನ್ನು, ಯಸ್ ಬ್ಯಾಂಕಿನ ಗ್ರಾಹಕರ ಕೇಂದ್ರವು ಸಮರ್ಪಕವಾಗಿ ನಿಭಾಯಿಸುತ್ತಿಲ್ಲ ಅಥವಾ ಪರಿಹರಿಸುತ್ತಿಲ್ಲ ಎಂದಾದರೆ, ಗ್ರಾಹಕನು ಯಸ್ ಬ್ಯಾಂಕಿನ ನೋಡಲ್ ಅಧಿಕಾರಿಯನ್ನು ಸಂಪರ್ಕಿಸಬಹುದು, ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಬ್ಯಾಂಕಿನ ವೆಬ್‌ತಾಣದಲ್ಲಿ ಕೊಡಲಾಗಿದೆ.

ಸಿ) ಗ್ರಾಹಕರ  ಎಲ್ಲಾ ದೂರುಗಳು, ವಿವಾದಗಳು ಅಥವಾ ಕುಂದುಕೊರತೆಗಳನ್ನು ಕ್ಲುಪ್ತ ಅವಧಿಯಲ್ಲಿ ನಿಭಾಯಿಸಬೇಕು ಮತ್ತು / ಅಥವಾ ಪರಿಹರಿಸಬೇಕು ಎಂಬುದನ್ನು ಯಸ್ ಬ್ಯಾಂಕ್ ಒಪ್ಪುತ್ತದೆ.

ಡಿ) ಗ್ರಾಹಕರು ತಮ್ಮ ದೂರು ಪರಿಹಾರಕ್ಕಾಗಿ ಬ್ಯಾಂಕಿಂಗ್ ಸಾರ್ವಜನಿಕ ತನಿಖಾಧಿಕಾರಿಯನ್ನು ಯಾವುದೇ ಸಮಯದಲ್ಲಿ ಸಂಪರ್ಕಿಸಬಹುದು.